ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ದಿಯ ಧ್ವನಿ
suryapragathidailynews@gmail.com 9901010109 L2/RNP-1285/TMR/2025-27

Volume:05 ಸಂಪುಟ: 05 | Issue:224 ಸಂಚಿಕೆ: 224 | Date:29-09-2026 Tuesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಬರ ಪರಿಹಾರ ಬಿಡುಗಡೆ ಮಾಡುವಂತೆ ಕೇಂದ್ರದ ಮೇಲೆ ಮತ್ತಷ್ಟು ಒತ್ತಡ

ಬರ ಯಾವುದೇ ಪಕ್ಷಕ್ಕೆ ಸೀಮಿತವಲ್ಲ; ಕರ್ನಾಟಕದ ಜನರ ಹಿತಾಸಕ್ತಿಗಾಗಿ ಎಲ್ಲರೂ ಒಗ್ಗೂಡಬೇಕು: ಡಿಸಿಎಂ ಕರೆ

ಬೆಂಗಳೂರು, ಸೆಪ್ಟೆಂಬರ್ 28: ರಾಜ್ಯ ಸರ್ಕಾರದ ಮನವಿ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮೂರು ತಂಡಗಳು ಕರ್ನಾಟಕಕ್ಕೆ ಆಗಮಿಸಿ ಬರ ಪರಿಸ್ಥಿತಿಯ ಕುರಿತು ಅಧ್ಯಯನ ನಡೆಸಲಿವೆ. ತುಮಕೂರು, ಚಿತ್ರದುರ್ಗ, ದಾವಣಗೆರೆ ಭಾಗದಲ್ಲಿ ಒಂದು ತಂಡ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮತ್ತೊಂದು ತಂಡ ಹಾಗೂ ಮಂಡ್ಯ, ಮೈಸೂರು, ಚಾಮರಾಜನಗರ ಸೇರಿದಂತೆ ಮೈಸೂರು ಭಾಗದಲ್ಲಿ ಮೂರನೇ ತಂಡ ಅಧ್ಯಯನ ನಡೆಸಲಿದೆ ಎಂದು ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ಅವರು ತಿಳಿಸಿದರು.



ಸದಾಶಿವನಗರದ ನಿವಾಸದ ಬಳಿ ಇಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರದ ತಂಡಗಳು ಬರಪೀಡಿತ ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ತಮ್ಮ ವರದಿಯನ್ನು ಸಲ್ಲಿಸಲಿವೆ. ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ಮೆಮೊರಾಂಡಂ ಸಲ್ಲಿಸಿದ್ದು, ಅದರ ಆಧಾರದ ಮೇಲೆಯೇ ಕೇಂದ್ರದ ತಂಡಗಳು ಪರಿಶೀಲನೆ ನಡೆಸಲಿವೆ. ಇದರ ಜೊತೆಗೆ ರಾಜ್ಯ ಸರ್ಕಾರದಿಂದ ಮತ್ತೊಂದು ಮೆಮೊರಾಂಡಂ ಕೂಡ ಸಲ್ಲಿಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಬರ ಎಂದು ಘೋಷಿಸಲಾಗಿರುವ ಎಲ್ಲ ತಾಲೂಕುಗಳ ಬಗ್ಗೆಯೂ ಕೇಂದ್ರದ ತಂಡಗಳು ಮಾಹಿತಿಯನ್ನು ಸಂಗ್ರಹಿಸುವ ಸಾಧ್ಯತೆಯಿದೆ. ಕೆಲವು ತಾಲೂಕುಗಳಿಗೆ ತಂಡಗಳು ಖುದ್ದಾಗಿ ಭೇಟಿ ನೀಡಿ ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳಲಿವೆ. ರಾಜ್ಯ ಸರ್ಕಾರ ಸಲ್ಲಿಸಿರುವ ವರದಿಯಲ್ಲಿನ ಅಂಶಗಳು ಹಾಗೂ ಕೇಂದ್ರದ ತಂಡಗಳು ಸ್ಥಳದಲ್ಲೇ ನಡೆಸುವ ಪರಿಶೀಲನೆಯಲ್ಲಿನ ವಾಸ್ತವಾಂಶಗಳ ನಡುವೆ ಯಾವುದೇ ವ್ಯತ್ಯಾಸವಿದೆಯೇ ಎಂಬುದನ್ನೂ ಅವರು ಪರಿಶೀಲಿಸಲಿದ್ದಾರೆ ಎಂದು ಡಾ.ಜಿ.ಪರಮೇಶ್ವರ ವಿವರಿಸಿದರು.

ರಾಜ್ಯದ ಬರ ಪೀಡಿತ ತಾಲೂಕುಗಳ ಘೋಷಣೆ ಕೇಂದ್ರದ ಮಾರ್ಗಸೂಚಿ ಆಧಾರಿತ : ಕೇಂದ್ರದ ಮಾರ್ಗಸೂಚಿಗಳ ಪ್ರಕಾರವೇ ಗ್ರೌಂಡ್ ಟ್ರೂಥಿಂಗ್ ನಡೆಯಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರದ ತಂಡಗಳಿಗೆ ತಮ್ಮದೇ ಆದ ಮಾರ್ಗಸೂಚಿಗಳಿವೆ. ರಾಜ್ಯ ಸರ್ಕಾರವೂ ಬರ ತಾಲೂಕುಗಳನ್ನು ಘೋಷಿಸುವ ಸಂದರ್ಭದಲ್ಲಿ ಇದೇ ಮಾರ್ಗಸೂಚಿಗಳನ್ನು ಅನುಸರಿಸಿದೆ ಎಂದು ಹೇಳಿದರು. ಮಾರ್ಗಸೂಚಿಗಳಲ್ಲಿರುವ ಮಾನದಂಡಗಳನ್ನು ಆಧರಿಸಿಯೇ ಬರಪೀಡಿತ ತಾಲೂಕುಗಳನ್ನು ಘೋಷಿಸಲಾಗಿದೆ. ಮಾರ್ಗಸೂಚಿಗಳ ವ್ಯಾಪ್ತಿಗೆ ಬರದ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿಲ್ಲ. ಹೀಗಾಗಿ ಕೇಂದ್ರದ ತಂಡಗಳು ಪರಿಶೀಲನೆ ನಡೆಸಿದಾಗ ರಾಜ್ಯ ಸರ್ಕಾರದ ವರದಿ ಹಾಗೂ ಅವರ ಪರಿಶೀಲನೆಯ ನಡುವೆ ಹೆಚ್ಚಿನ ವ್ಯತ್ಯಾಸ ಕಂಡುಬರುವ ಸಾಧ್ಯತೆ ಇಲ್ಲ ಎಂದು ಅವರು ಹೇಳಿದರು.

ಸಣ್ ಸುದ್ದಿ

ಮೈಸೂರು ದಸರಾದಲ್ಲಿ ಏರ್ ಶೋ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಒಪ್ಪಿಗೆ; ಡಿ.ಕೆ.ಶಿವಕುಮಾರ್




ಈ ಬಾರಿ ಮೈಸೂರು ದಸರಾದಲ್ಲಿ ಏರ್ ಶೋ ಜೊತೆಗೆ ಸೇನಾ ಪರೇಡ್ ನಡೆಸಿಕೊಡಲು ಅನುಮತಿ ಕೋರಿದ್ದು, ಇದಕ್ಕೆ ರಾಜನಾಥ್ ಸಿಂಗ್ ಒಪ್ಪಿಗೆ ಸೂಚಿಸಿದ್ದಾರೆ. ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿಕೆಶಿ, ಈ ಬಾರಿ ಮೈಸೂರು ದಸರಾದಲ್ಲಿ ಸೇನಾ ಪರೇಡ್ ನಡೆಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಮೂರು ಸೇನೆಗಳು ಭಾಗಿಯಾಗಬೇಕು ಎಂದು ಮನವಿ ಮಾಡಿದ್ದೇನೆ. ಇದಕ್ಕೆ ಅವರು ಒಪ್ಪಿದ್ದು, ದಸರಾದಲ್ಲಿ ಸೇನಾ ಪರೇಡ್ ಹಾಗೂ ಏರ್ ಶೋ ಕೂಡಾ ನಡೆಯಲಿದೆ ಎಂದು ಮಾಹಿತಿ ನೀಡಿದರು.



ವಿಂಡೀಸ್ ವಿರುದ್ಧ ಸಿಕ್ಸರ್‌ಗಳ ಮಳೆ; ತನ್ನದೇ ದಾಖಲೆ ಮುರಿದ ವಿರಾಟ್ ಕೊಹ್ಲಿವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅಜೇಯ 139 ರನ್ ಸಿಡಿಸಿ, ತಮ್ಮ ಏಕದಿನ ವೃತ್ತಿಜೀವನದಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳ (9) ದಾಖಲೆಯನ್ನು ಮುರಿದರು. ಟೆಸ್ಟ್ ಮತ್ತು ಟಿ20 ನಿವೃತ್ತಿಯ ಬಳಿಕ ಆಕ್ರಮಣಕಾರಿ ಬ್ಯಾಟಿಂಗ್ ಮಾಡುತ್ತಿರುವ ಕೊಹ್ಲಿ, ಈ ಶತಕದೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 15,000 ರನ್‌ಗಳ ಮೈಲಿಗಲ್ಲನ್ನು ತಲುಪಿದರು. ಅವರ ಹೊಸ ಆಟದ ಶೈಲಿ ಮತ್ತು ದಾಖಲೆಗಳ ಸೃಷ್ಟಿ ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿದೆ.

ಭದ್ರ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸಿದ್ದ 5300 ಕೋಟಿ ರೂ. ಬಿಡುಗಡೆ ಮಾಡಿ: ಮುರುಳೀಧರ ಹಾಲಪ್ಪ ಒತ್ತಾಯ



ಸೂರ್ಯಪ್ರಗತಿನ್ಯೂಸ್.ಕಾಂ

ಶಿರಾ: ಕೇಂದ್ರ ಸರ್ಕಾರ ಬಜೆಟ್‌ನಲ್ಲಿ 5300 ಕೋಟಿ ಬಿಡುಗಡೆ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದರು. ಕೇಂದ್ರ ಸರ್ಕಾರ ವಾಗ್ದಾನ ನೀಡಿದ್ದಂತೆ ಸಂಪೂರ್ಣವಾಗಿ 5300 ಕೋಟಿ ರೂಗಳನ್ನು ಬಿಡುಗಡೆ ಮಾಡಬೇಕು. ಸರಕಾರ ಈ ಹಣ ಬೇರೆ ಉದ್ದೇಶಕ್ಕೆ ಬಳಕೆ ಮಾಡದೆ ಕಾಮಗಾರಿ ಪೂರ್ಣಗೊಳಿಸುತ್ತದೆ. ಕರ್ನಾಟಕದಿಂದ ಆಯ್ಕೆಯಾಗಿರುವ ಸಂಸತ್ ಸದಸ್ಯರು ಗಟ್ಟಿ ಧ್ವನಿಯಲ್ಲಿ ಕೇಂದ್ರ ಸರಕಾರವನ್ನು ಒತ್ತಾಯ ಮಾಡಿ ಎಂದು ಕೌಶಲ್ಯಾಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರುಳೀಧರ ಹಾಲಪ್ಪ ಒತ್ತಾಯಿಸಿದರು.

ಅವರು ಭದ್ರಾ ಮೇಲ್ದಂಡೆ ಯೋಜನೆಯ ಮೂಲಕ ಚಿತ್ರದುರ್ಗ ಜಿಲ್ಲೆಗೆ ನೀರು ಬರುವಂತೆಯೇ, ತುಮಕೂರು ಜಿಲ್ಲೆಯ ಗಡಿ ಭಾಗದ ತಾಲೂಕುಗಳಾದ ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ ಹಾಗೂ ಪಾವಗಡ ತಾಲೂಕುಗಳ ನೀರಾವರಿ ಸಮಸ್ಯೆಗಳು ಮತ್ತು ಸಾವಾಲುಗಳ ಬಗ್ಗೆ ಶಿರಾ ನಗರದ ಭದ್ರಾ ಮೇಲ್ದಂಡೆ ಯೋಜನೆ ಇಲಾಖೆಯ ಬಳಿ ಸಭೆ ಸೇರಿ ಮಾತನಾಡಿದರು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ ಹಾಗೂ ಪಾವಗಡ ತಾಲೂಕುಗಳಿಗೆ ಭದ್ರಾ ಮೇಲ್ದಂಡೆ ಯೋಜನೆಯಿಂದ ಶಾಶ್ವತವಾಗ ನೀರು ಸಿಗುವ ನಿರೀಕ್ಷೆ ಇದೆ. ಆದ್ದರಿಂದ ಕಾಮಗಾರಿ ತ್ವರಿತವಾಗಿ ಸಂಪೂರ್ಣವಾಗಿ ಅನುಷ್ಠಾನ ಆಗಬೇಕು. ಇದು ನಿಗಧಿತವಾಗಿರುವ ನೀರು. ಈ ನೀರು ಬಂದರೆ ಶಾಶ್ವತವಾದ ಯೋಜನೆಯಾಗಲಿದೆ ಎಂದರು.

ಗೌಡಗೆರೆ ಹೋಬಳಿಗೆ ಭದ್ರ ಯೋಜನೆ ನೀರು ಹರಿಸಿ: ಶಿರಾ ತಾಲೂಕಿನ ಗೌಡಗೆರೆ ಹೋಬಳಿಯ ಕೆರೆಗಳಿಗೆ ಭದ್ರ ಮೇಲ್ದಂಡೆ ಯೋಜನೆಯ ನೀರು ಹರಿಸಿ ಎಂದು ಗೌಡಗೆರೆ ಹೋಬಳಿಯ ರೈತರು ಭದ್ರ ಮೇಲ್ದಂಡೆ ಅಧಿಕಾರಿಗಳ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಮನವಿ ಸಲ್ಲಿಸಿ ಮಾತನಾಡಿದ ಮುಖಂಡರಾದ ನೇರಲಗುಡ್ಡ ಶಿವಕುಮಾರ್ ಅವರು ಗೌಡಗೆರೆ ಹೋಬಳಿಯು ಬರಪೀಡಿತ ಪ್ರದೇಶವಾಗಿದ್ದು, ಕಡಿಮೆ ಮಳೆ, ಅಂತರ್ಜಲ ಕುಸಿತ ಮತ್ತು ಕೃಷಿ ಸಂಕಷ್ಟಗಳಿಂದ ಬಳಲುತ್ತಿದೆ. ಆದ್ದರಿಂದ ಭದ್ರ ಮೇಲ್ದಂಡೆ ಯೋಜನೆಯಡಿ ಗೌಡಗೆರೆ ಹೋಬಳಿಯ ಗೌಡಗೆರೆ, ಹೊನ್ನೇನಹಳ್ಳಿ, ಬಾಲೇನಹಳ್ಳಿ, ಕಳುವರಹಳ್ಳಿ, ಮೇಳೆಕೋಟೆ, ಮೊಸರುಕುಂಟೆ, ಪುರಲೇಹಳ್ಳಿ, ಮದ್ದಕ್ಕನಹಳ್ಳಿ, ಡ್ಯಾಗೇರಹಳ್ಳಿ, ಭೂತಕಾಟನಹಳ್ಳಿ, ಬಂದಕುಂಟೆ, ಕಗ್ಗಲಡು ಕೆರೆಗಳಿಗೆ ಭದ್ರ ಯೋಜನೆಯಡಿ ನೀರು ಹರಿಸಿ ಎಂದು ಒತ್ತಾಯಿಸಿದರು.

ದಸರಾ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳ ಪೂರ್ವ ಸಿದ್ಧತೆಗೆ ಡಿಸಿ ಚಾಲನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲಾಡಳಿತದ ವತಿಯಿಂದ ಅಕ್ಟೋಬರ್ 11ರಿಂದ 21ರವರೆಗೆ ನಡೆಯಲಿರುವ ತುಮಕೂರು ದಸರಾ–2026ರ ಅಂಗವಾಗಿ ಆಯೋಜಿಸಲಾಗುವ ಧಾರ್ಮಿಕ ಕಾರ್ಯಕ್ರಮಗಳ ವೇದಿಕೆ ನಿರ್ಮಾಣ ಕಾಮಗಾರಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಇಂದು ವಿಧಿವತ್ತಾಗಿ ಚಾಲನೆ ನೀಡಿದರು.

ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ದಸರಾ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಕೈಗೊಳ್ಳಲಾಗುತ್ತಿರುವ ಪೂರ್ವ ಸಿದ್ಧತೆ ಹಾಗೂ ವೇದಿಕೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಧಾರ್ಮಿಕ ಕಾರ್ಯಕ್ರಮಗಳ ಆಯೋಜನೆ, ವಿಧಿ–ವಿಧಾನಗಳು ಹಾಗೂ ಅಗತ್ಯ ಸೌಲಭ್ಯಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ, ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯುವಂತೆ ಅಗತ್ಯ ಮುನ್ನೆಚ್ಚರಿಕೆ ಹಾಗೂ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಸೂಚಿಸಿದರು.



ದಸರಾ ಅಂಗವಾಗಿ ನಿರ್ಮಿಸಲಾಗುತ್ತಿರುವ ಧಾರ್ಮಿಕ ಮಂಟಪ, ಸಾಂಸ್ಕೃತಿಕ ದಸರಾ ವೇದಿಕೆ, ನೃತ್ಯ ವೇದಿಕೆ ಸೇರಿದಂತೆ ವಿವಿಧ ವೇದಿಕೆಗಳ ನಿರ್ಮಾಣ ಕಾರ್ಯಗಳ ಪ್ರಗತಿಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿದರು. ಪ್ರೇಕ್ಷಕರಿಗೆ ಕಾರ್ಯಕ್ರಮಗಳನ್ನು ಸುಗಮವಾಗಿ ವೀಕ್ಷಿಸಲು ಅನುಕೂಲವಾಗುವಂತೆ ಆಸನ ವ್ಯವಸ್ಥೆ, ವಿದ್ಯುತ್ ಬೆಳಕು, ಧ್ವನಿ ವ್ಯವಸ್ಥೆ, ಸುರಕ್ಷತಾ ಕ್ರಮ ಹಾಗೂ ಪ್ರವೇಶ ನಿರ್ಗಮನ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ದಸರಾ ಕಾರ್ಯಕ್ರಮಗಳ ವಿವಿಧ ವೇದಿಕೆಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಕಲಾ ಹಾಗೂ ನೃತ್ಯ ಕಾರ್ಯಕ್ರಮಗಳು ಸಾರ್ವಜನಿಕರು ಹಾಗೂ ವಿವಿಧ ಕಲಾ ತಂಡಗಳಿಗೆ ಅಗತ್ಯವಾದ ಮೂಲಸೌಕರ್ಯ ಕಲ್ಪಿಸುವ ಕುರಿತು ಚರ್ಚಿಸಲಾಯಿತು. ಕಾರ್ಯಕ್ರಮಗಳ ವೇಳಾಪಟ್ಟಿಗೆ ಅನುಗುಣವಾಗಿ ವೇದಿಕೆಗಳು ಹಾಗೂ ಸಂಬಂಧಿತ ಸೌಲಭ್ಯಗಳ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜ ಬಿ.ವಿ., ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ, ಮಹಾನಗರ ಪಾಲಿಕೆ ಆಯುಕ್ತ ಶುಭ, ತುಮಕೂರು ಉಪ ವಿಭಾಗಾಧಿಕಾರಿ ನಾಹೀದ ಜಮ್ ಜಮ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ದಸರಾ ಸಮಿತಿಗಳ ಪದಾಧಿಕಾರಿಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಪಾವಗಡ ತಾಲೂಕಿನಲ್ಲಿ ಆಡಳಿತದ ನಿರ್ಲಕ್ಷ್ಯಕ್ಕೆ ನಲುಗುತ್ತಿರುವ ಬಡ ಜೀವಗಳು

ವರದಿ: ಎನ್. ನರಸಿಂಹಪ್ಪ, ಸೂರ್ಯಪ್ರಗತಿನ್ಯೂಸ್.ಕಾಂ

ಪಾವಗಡ: ಸರ್ಕಾರದ ಗ್ಯಾರಂಟಿ ಯೋಜನೆಗಳು ಪ್ರತಿ ಮನೆ ಬಾಗಿಲು ತಲುಪಿವೆ ಎಂದು ಆಡಳಿತ ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವದಲ್ಲಿ ಪಾವಗಡ ತಾಲೂಕಿನಲ್ಲಿ ಮೂಲ ದಾಖಲೆಗಳೇ ಇಲ್ಲದೆ ಸರ್ಕಾರದ ಸೌಲಭ್ಯಗಳಿಂದ ಸಂಪೂರ್ಣ ವಂಚಿತರಾಗಿರುವ ಕುಟುಂಬಗಳ ದಾರುಣ ಕಥೆಗಳು ಒಂದೊಂದಾಗಿ ಬೆಳಕಿಗೆ ಬರುತ್ತಿವೆ.ವೆಂಕಟಾಪುರ ಗ್ರಾಮದಲ್ಲಿ ಒಬ್ಬಂಟಿ ಜೀವನ ಸಾಗಿಸುತ್ತಿರುವ ಪುರುಷೋತ್ತಮ್ ಹಾಗೂ ಮೀನಕುಂಟನಹಳ್ಳಿ ಗ್ರಾಮದ ಮುತ್ಯಾಲಮ್ಮ ಮತ್ತು ಅವರ ಮಗ ಮಲ್ಲಿಕಾರ್ಜುನ ಅವರ ದುಸ್ಥಿತಿ ಇಡೀ ತಾಲೂಕಿನ ಆಡಳಿತ ವ್ಯವಸ್ಥೆಯ ವೈಫಲ್ಯಕ್ಕೆ ಕನ್ನಡಿ ಹಿಡಿದಿದೆ.ವೆಂಕಟಾಪುರದಲ್ಲಿ ಒಬ್ಬಂಟಿ ಪುರುಷೋತ್ತಮ್

ವೆಂಕಟಾಪುರ ಗ್ರಾಮದ 45 ವರ್ಷದ ಪುರುಷೋತ್ತಮ್ ಅವರಿಗೆ ತಂದೆಯೂ ಇಲ್ಲ, ತಾಯಿಯೂ ಇಲ್ಲ, ಸಂಬಂಧಿಕರೂ ಇಲ್ಲ. ಪಡಿತರ ಚೀಟಿ ಇಲ್ಲ, ಆಧಾರ್ ಕಾರ್ಡ್ ಇಲ್ಲ, ವೋಟರ್ ಐಡಿ ಇಲ್ಲ, ಸ್ವಂತ ಮನೆಯೂ ಇಲ್ಲ. ಕೂಲಿ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಅವರಿಗೆ ಸರ್ಕಾರದ ಒಂದು ಯೋಜನೆಯೂ ತಲುಪಿಲ್ಲ.

45 ವರ್ಷ ದಾಟಿದರೂ ಒಂದು ಗುರುತಿನ ಚೀಟಿ ಇಲ್ಲದ ಕಾರಣ ಪಡಿತರ ಅಕ್ಕಿಯೂ ಸಿಗುತ್ತಿಲ್ಲ, ಯಾವುದೇ



ಸೌಲಭ್ಯಕ್ಕೆ ಅರ್ಜಿ ಹಾಕಲೂ ಸಾಧ್ಯವಾಗುತ್ತಿಲ್ಲ. ಮೀನಕುಂಟನ ಹಳ್ಳಿಯಲ್ಲಿ ಮತ್ತೊಂದು ದುರಂತ ಇದೇ ರೀತಿಯ ಕಥೆ ತಾಲೂಕಿನ ಮೀನಕುಂಟನಹಳ್ಳಿ ಗ್ರಾಮದಲ್ಲೂ ಇದೆ. ಅಲ್ಲಿನ ಮುತ್ಯಾಲಮ್ಮ ಮತ್ತು ಅವರ ಮಗ ಮಲ್ಲಿಕಾರ್ಜುನ ಅವರಿಗೆ ಕೂಡ ಪಡಿತರ ಚೀಟಿಯೇ ಇಲ್ಲ. ಹಲವು ವರ್ಷಗಳಿಂದ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅದರಲ್ಲೂ ಮಲ್ಲಿಕಾರ್ಜುನ ಅವರಿಗೆ ಕಿವಿ ಕೇಳಿಸುವುದಿಲ್ಲ. ವಿಶೇಷಚೇತನರಿಗೆ ಸಿಗಬೇಕಾದ ಸೌಲಭ್ಯವೂ ಅವರಿಗೆ ತಲುಪಿಲ್ಲ. ಇಂತಹ ಕುಟುಂಬಗಳನ್ನು ಗುರುತಿಸಿ ನೆರವಾಗಬೇಕಾದ ಇಲಾಖೆಗಳು ಕಣ್ಣು ಮುಚ್ಚಿ ಕುಳಿತಿವೆ.ಆಡಳಿತ ವ್ಯವಸ್ಥೆ ಸಂಪೂರ್ಣ ವಿಫಲ ಪಂಚಾಯಿತಿ ಮತ್ತು ಕಂದಾಯ ಇಲಾಖೆ PDO ಮತ್ತು VA ಗಳು ತಮ್ಮ ವ್ಯಾಪ್ತಿಯಲ್ಲಿ ಸರಿಯಾದ ಸಮೀಕ್ಷೆ ನಡೆಸುತ್ತಿಲ್ಲ. ಅತೀ ಬಡ, ನಿರ್ಗತಿಕರನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ.

ಗ್ಯಾರಂಟಿ ಅನುಷ್ಠಾನ ಸಮಿತಿ ಏನು ಮಾಡುತ್ತಿದೆ? ಕಟ್ಟಕಡೆಯ ವ್ಯಕ್ತಿಗೆ ಗ್ಯಾರಂಟಿ ಯೋಜನೆ ತಲುಪಬೇಕು ಎಂದು ಸಮಿತಿಗಳನ್ನು ರಚಿಸಲಾಗಿದೆ. ಆದರೆ ಪುರುಷೋತ್ತಮ್, ಮುತ್ಯಾಲಮ್ಮರಂತಹವರಿಗೆ ಕನಿಷ್ಠ ಪಡಿತರ ಚೀಟಿಯೂ ಇಲ್ಲದಿರುವುದು ಈ ಸಮಿತಿಗಳು ಕೇವಲ ಕಾಗದದ ಮೇಲೆ ಮಾತ್ರ ಇವೆ ಎಂಬುದನ್ನು ಸಾಬೀತುಪಡಿಸುತ್ತದೆ.

ತಕ್ಷಣದ ನೆರವಿಗೆ ಆಗ್ರಹ

ತಾಲೂಕು ಆಡಳಿತ, ತಹಶೀಲ್ದಾರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಕಾರ್ಮಿಕ ಇಲಾಖೆಯ ಹಿರಿಯ ಅಧಿಕಾರಿಗಳು ತಕ್ಷಣ ವೆಂಕಟಾಪುರ ಮತ್ತು ಮೀನಕುಂಟನಹಳ್ಳಿ ಗ್ರಾಮಗಳಿಗೆ ಭೇಟಿ ನೀಡಬೇಕು. ಪುರುಷೋತ್ತಮ್, ಮುತ್ಯಾಲಮ್ಮ ಮತ್ತು ಮಲ್ಲಿಕಾರ್ಜುನ ಅವರಿಗೆ ತಕ್ಷಣ ಆಧಾರ್, ವೋಟರ್ ಐಡಿ, ಪಡಿತರ ಚೀಟಿ ಮಾಡಿಸಿಕೊಟ್ಟು, ವಸತಿ ಯೋಜನೆ, ಅಂಗವಿಕಲ ವೇತನ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಡಿ ನೆರವು ಕಲ್ಪಿಸಬೇಕು ಎಂದು ಸಾರ್ವಜನಿಕರು ಮತ್ತು ರಾಜ್ಯ ಯುವ ಹೋರಾಟ ಸಮಿತಿ ಒತ್ತಾಯಿಸಿದೆ.

ಕೇವಲ ಪ್ರಚಾರಕ್ಕಷ್ಟೇ ಸೀಮಿತವಾಗದೆ, ನಿಜವಾದ ಫಲಾನುಭವಿಗಳನ್ನು ಹುಡುಕಿ ನೆರವಾಗುವ ಕಳಕಳಿಯನ್ನು ಆಡಳಿತ ತೋರುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ವೈ.ಎನ್. ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಜೀವ ಭಯದಲ್ಲೇಕರ್ತವ್ಯ ಸುರಿದ ಮಳೆಗೆ ಸೋರುತ್ತಿರುವ ಠಾಣೆ



ಸೂರ್ಯಪ್ರಗತಿನ್ಯೂಸ್.ಕಾಂ

ಪಾವಾಗಡ: ತಾಲ್ಲೂಕಿನ ವೈ. ಎನ್ ಹೊಸಕೋಟೆ ಪೊಲೀಸ್ ಠಾಣೆಯು ಮಳೆ ಬಂದರೆ ಸೋರುತ್ತಿದ್ದು, ಯಾವಾಗ ಸೀಲಿಂಗ್ ತಲೆ ಮೇಲೆ ಬೀಳುತ್ತೋ ಎಂಬ ಭಯದಲ್ಲೇ ಪೊಲೀಸರು ಕರ್ತವ್ಯ ನಿರ್ವಹಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂದಾಗಲೆಲ್ಲಾ ಠಾಣೆಯಲ್ಲಿ ಮಳೆ ನೀರು ಸೋರಿ ಕೆಸರು ಗದ್ದೆ ಸೃಷ್ಟಿಯಾಗುತ್ತಿದೆ.

ತಾಲ್ಲೂಕಿನ ಅತಿ ದೊಡ್ಡ ಹೋಬಳಿ ಕೇಂದ್ರದ ವೈ.ಎನ್. ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಇಂತಹ ದಯನೀಯ ಸ್ಥಿತಿ ಇದ್ದು ಕಳೆದ ಎರಡು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಪೊಲೀಸ್ ಠಾಣೆ ಸಂಪೂರ್ಣವಾಗಿ ಠಾಣೆಯ ಕೊಠಡಿಗಳೆಲ್ಲ ಮಳೆ ನೀರಿನಿಂದ ತುಂಬಿವೆ.

ಕಟ್ಟಡದ ಸೀಲಿಂಗ್ ಸೋರುತ್ತಿದ್ದು, ಗೋಡೆಗಳೆಲ್ಲ ತೇವಗೊಂಡು ಸಿಮೆಂಟ್ ಪ್ಲಾಸ್ಟಿಂಗ್ ಕಿತ್ತು ಬೀಳುತ್ತಿದೆ. ಮಹತ್ವದ ದಾಖಲೆಗಳು, ಎಫ್‌ಐಆರ್ ಪುಸ್ತಕಗಳು, ಕಂಪ್ಯೂಟರ್ ಗಳನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಮುಚ್ಚಿ ರಕ್ಷಿಸಿಕೊಳ್ಳುವ ಪರಿಸ್ಥಿತಿ ಬಂದಿದೆ.

ದೂರು ನೀಡಲು ಬರುವ ಸಾರ್ವಜನಿಕರು ಮತ್ತು ಕರ್ತವ್ಯದಲ್ಲಿರುವ ಪೊಲೀಸ್ ಸಿಬ್ಬಂದಿ ತಲೆಗೆ ಕೊಡೆ ಹಿಡಿದು ಕೂರುವಂತಾಗಿದೆ. ರಾತ್ರಿ ಪಾಳಿಯಲ್ಲಿರುವ ಸಿಬ್ಬಂದಿ ಮಲಗಲೂ ಜಾಗವಿಲ್ಲದೆ ಪರದಾಡುತ್ತಿದ್ದಾರೆ. ಅಪರಾಧಿಗಳನ್ನು ಹಿಡಿಯಬೇಕಾದ ಪೊಲೀಸರೇ ಸೋರುವ ಕಟ್ಟಡದಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾದ ದುಸ್ಥಿತಿ ಬಂದಿದೆ.

ಕೂಡಲೇ ಜಿಲ್ಲಾಡಳಿತ ಮತ್ತು ಇಲಾಖೆಯ ಮೇಲಾಧಿಕಾರಿಗಳು ಗಮನಹರಿಸಿ, ಹೊಸ ಕಟ್ಟಡ ನಿರ್ಮಿಸಿಕೊಡಬೇಕು ಅಥವಾ ದುರಸ್ತಿ ಮಾಡಿಸಬೇಕಿದೆ. ಆ ಮೂಲಕ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕು ಎಂದು ಪೊಲೀಸ್ ಸಿಬ್ಬಂದಿ ಕೋರಿದ್ದಾರೆ.

ಶಾಸಕರು ಈ ಹಿಂದೆ ಠಾಣೆಗೆ ಬೇಟಿ ನೀಡಿದಾಗ ಠಾಣೆಯ ದುಸ್ಥಿತ್ಯ ಬಗ್ಗೆ ಮನವರಿಕೆ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಹೊಸ ಠಾಣೆ ನಿರ್ಮಾಣದ ಬಗ್ಗೆ ಬರವಸೆ ನೀಡಿದ್ದರು. ಆದರೆ ಭರವಸೆ ಇನ್ನೂ ಈಡೇರದೆ ಇಂದಿನ ಸ್ಥಿತಿಯಲ್ಲಿ ಠಾಣೆಯ ಸಿಬ್ಬಂದಿ ಜೀವಿಸಬೇಕಾಗಿದ್ದು, ತಕ್ಷಣ ಹೊಸ ಠಾಣೆ ನಿರ್ಮಾಣ ಕಾರ್ಯ ಪ್ರಾರಂಭವಾಗಬೇಕು ಎಂದು ಮುಖಂಡರು ಮತ್ತು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಚುನಾವಣಾ ಆಯೋಗದ ಜ್ಞಾನೇಶ ಕುಮಾರ್ ಅವರ ರಾಜೀನಾಮೆ ಪಡೆಯಬೇಕು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ ಭಾರತೀಯ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾದ ಜ್ಞಾನೇಶಕುಮಾರ್ ಅವರ ರಾಜೀನಾಮೆ ಪಡೆಯಬೇಕು ಹಾಗೂ ಇದುವರೆಗೂ ಆಗಿರುವ ಎಸ್.ಐ.ಆರ್. ಪ್ರಕ್ರಿಯೆಗಳನ್ನು ರದ್ದು ಮಾಡಬೇಕೆಂದು ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಾ ನಿರತ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಂಸದ ಎಸ್.ಪಿ.ಮುದ್ದ ಹನುಮೇಗೌಡಎಸ್. ಐ.ಆರ್.ನಂತಹ ಸಂವಿಧಾನ ಬಾಹಿರ ಯೋಜನೆಯನ್ನು ಜಾರಿಗೆ ತಂದ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಪಡೆದು, ಅಕ್ರಮಗಳ ತನಿಖೆ ನಡೆಸಬೇಕು ಹಾಗೂ ಇದುವರೆಗೂ ಆಗಿರುವ ಎಸ್.ಐ.ಆರ್ ಪ್ರಕ್ರಿಯೆಯ ಜೊತೆಗೆ, ಎಸ್.ಐ.ಆರ್.ನಂತರ ನಡೆದಿರುವ ಚುನಾವಣೆಗಳನ್ನು ರದ್ದು ಮಾಡಬೇಕೆಂಬುದು ನಮ್ಮ ಆಗ್ರಹವಾಗಿದೆ. ಮುಖ್ಯ ಚುನಾವಣೆ ಆಯುಕ್ತರು ಎಸ್.ಐ.ಆರ್. ಹೆಸರಿನಲ್ಲಿ ನಡೆಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ,ಇದನ್ನು ಪ್ರಶ್ನಿಸಿದ ಲೋಕಸಭೆಯ ವಿರೋಧಪಕ್ಷದ ನಾಯಕರಿಗೆ ಉಢಾಪೆ ಉತ್ತರ ನೀಡುವ ಮೂಲಕ ಪ್ರಶ್ನಾತೀತ ಎಂಬಂತೆ ನಡೆದುಕೊಂಡಿದ್ದಾರೆ. ಇದನ್ನು ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು. ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ಓಟ್‌ಚೋರಿಯ ಬಗ್ಗೆ ಮಾತನಾಡಿದರೆ, ಬಿಜೆಪಿ ಅಧಿಕಾರದಲ್ಲಿರುವ 12 ರಾಜ್ಯಗಳ ಮುಖ್ಯಮಂತ್ರಿಗಳು ಪತ್ರಿಕಾಗೋಷ್ಠಿ ನಡೆಸಿ, ಓಟ್ ಚೋರಿ ಬೆಂಬಲಿಸಿರುವುದು



ನಾಚಿಕೆ ಗೇಡಿನ ಸಂಗತಿ. ಒಂದು ಸ್ವಾಯತ್ತ ಸಂಸ್ಥೆಯನ್ನು ಒಂದು ಪಕ್ಷದ ಹಿತಾಸಕ್ತಿಗೆ ಅನುಗುಣವಾಗಿ ನಡೆಸುತ್ತಿರುವ ಜ್ಞಾನೇಶ ಕುಮಾರ್‌ಅವರು ರಾಜೀನಾಮೆ ನೀಡಬೇಕು. ಹಾಗೆಯೇ ಪಶ್ಚಿಮ ಬಂಗಾಳ,ಬಿಹಾರ ಚುನಾವಣೆಗಳನ್ನು ರದ್ದು ಮಾಡಬೇಕೆಂದು ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಆಗ್ರಹಿಸಿದರು.

ಮಾಜಿ ಶಾಸಕ ಡಾ.ಎಸ್.ಷಪಿ ಅಹಮದ್ ಮಾತನಾಡಿ, ಕಳೆದ ಒಂದು ವರ್ಷದ ಹಿಂದೆಯೇ ನಮ್ಮ ನಾಯಕರಾದ ರಾಹುಲ್‌ಗಾಂಧಿ ಅವರು ಓಟ್‌ಚೋರಿ ಬಗ್ಗೆ ಮಾತನಾಡಿದಾಗ ಮಾಧ್ಯಮಗಳ ಮೂಲಕ ಅವರ ಬಾಯಿ ಕಟ್ಟಿ ಹಾಕುವ ಕೆಲಸವನ್ನು ಬಿಜೆಪಿ ಮಾಡಿತ್ತು. ಆದರೆ ಚುನಾವಣಾ ಆಯೋಗದ ಇತರೆ ಆಯುಕ್ತರೇ ಇಂದು ತಮ್ಮ ನಡುವೆ ಹಲವು ವಿಚಾರಗಳಲ್ಲಿ ಭಿನ್ನಮತವಿದೆ ಎಂಬುದನ್ನು, ತಮ್ಮ ಆಕ್ಷೇಪಣೆಗಳಿಗೆ ಬೆಲೆ ಇಲ್ಲವೆಂದು ಸರಕಾರಕ್ಕೆ ಪತ್ರ ಬರೆದಿರುವುದು ಚುನಾವಣಾ ಆಯೋಗ ದಾರಿ ತಪ್ಪಿರುವುದಕ್ಕೆ ಸಾಕ್ಷಿಯಾಗಿದೆ. ಹಾಗಾಗಿ ಜ್ಞಾನೇಶ ಕುಮಾರ್‌ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್‌ಅಹಮದ್ ಮಾತನಾಡಿ, ಎಸ್.ಐ.ಆರ್‌ಎಂಬುದು ನ್ಯಾಯ ಸಮ್ಮತವಾಗಿಲ್ಲ ಎಂಬುದು ಇತ್ತೀಚಿನ ಚುನಾವಣಾ ಆಯೋಗದ ನಡವಳಿಕೆಗಳಿಂದ ಸಾಭೀತಾಗಿದೆ. ಕಾಂಗ್ರೆಸ್ ಯುವ ಜನರಿಗೆ ಮತದಾನದ ಹಕ್ಕು ನೀಡಿದರೆ, ಬಿಜೆಪಿ ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಸಂವಿಧಾನ ಬದ್ಧ ಮತದಾನದ ಹಕ್ಕನ್ನು ಕಸಿಯುವ ಮೂಲಕ ಜನಮತಕ್ಕೆ ವಿರುದ್ಧವಾಗಿ ನಡೆದು ಕೊಳ್ಳುತ್ತಿದೆ. ಇದಕ್ಕೆ ಎಂದಿಗೂ ಕಾಂಗ್ರೆಸ್ ಅವಕಾಶ ನೀಡುವುದಿಲ್ಲ. ಪ್ರತಿ ಪ್ರಜೆಯ ಮತದಾನದ ಹಕ್ಕು ರಕ್ಷಿಸಲು ಕಾಂಗ್ರೆಸ್ ಬದ್ಧವಾಗಿದೆಎಂದರು. ಜಿಲ್ಲಾಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರಗೌಡ ಮಾತನಾಡಿ, ಜ್ಞಾನೇಶಕುಮಾರ್ ಎಂಬ ವ್ಯಕ್ತಿಯ ಮೂಲಕ ಬಿಜೆಪಿ ವಾಮ ಮಾರ್ಗದಲ್ಲಿ ಅಧಿಕಾರ ಹಿಡಿಯುತ್ತಿದೆ.ಇದು ನಿಜವಾದ ಜನಾಭಿಪ್ರಾಯವಲ್ಲ. ಪ್ರಜಾಪ್ರಭುತ್ವದ ಹಬ್ಬಎನ್ನುವ ಚುನಾವಣೆಯ ಘನತೆ, ಗೌರವ ಕಾಪಾಡುವಲ್ಲಿ ಚುನಾವಣಾ ಆಯೋಗ ವಿಫಲವಾಗಿದೆ. ಇದರ ವಿರುದ್ಧಕಾಂಗ್ರೆಸ್ ಕಾರ್ಯಕರ್ತರು ಒಗ್ಗೂಡಿ, ಜ್ಞಾನೇಶ ಕುಮಾರ್ ರಾಜೀನಾಮೆ ನೀಡುವವರೆಗೂ ಹೋರಾಟ ನಡೆಸಲಿದ್ದೇವೆ. ಚುನಾವಣಾ ಆಯೋಗಕ್ಕೆ ಅಂಟಿರುವ ಕಳಂಕ ತೊಳೆಯಲು ಪ್ರಯತ್ನಿಸುವುದಾಗಿ ತಿಳಿಸಿದರು.ಮಾಜಿ ಶಾಸಕ ಡಾ.ರಫೀಕ್ ಅಹಮದ್ ಮಾತನಾಡಿ, ಪಶ್ಚಿಮ ಬಂಗಾಳ, ಬಿಹಾರದಂತಹ ರಾಜ್ಯಗಳಲ್ಲಿ ಎಸ್.ಐ.ಆರ್. ಮೂಲಕ ಅರ್ಹ ಮತದಾರರನ್ನುಕೈಬಿಟ್ಟು ಫಲಿತಾಂಶದಲ್ಲಿ ಏರುಪೇರಾಗುವಂತೆ ಬಿಜೆಪಿ ಮತ್ತುಚುನಾವಣಾ ಆಯೋಗ ಮಾಡಿದೆ. ಎಸ್.ಐ.ಆರ್‌ನ ನೇರಟಾರ್ಗೆಟ್ ಅಹಿಂದ ಮತದಾರರೇ ಆಗಿದ್ದಾರೆ. ಅಲ್ಲಲ್ಲಿ ಉದ್ದೇಶ ಪೂರ್ವಕವಾಗಿ ದಲಿತ, ಅನಕ್ಷರಸ್ಥ ಮತದಾರರ ಓಟ್‌ಗಳನ್ನು ತೆಗೆಯಲು ಫಾರಂ ನಂ 07 ಸಲ್ಲಿಸುವ ಮೂಲಕ ಅವರ ಹಕ್ಕು ಕಸಿಯಲಾಗುತ್ತಿದೆ. ಕೇಂದ್ರ ಸರಕಾರ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆ ಪಡೆಯದಿದ್ದಲ್ಲಿ ಮತ್ತಷ್ಟು ಉಗ್ರ ಹೋರಾಟ ನಡಸಲಾಗುವುದುಎಂದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಚಾರ ಸಮಿತಿಅಧ್ಯಕ್ಷ ವಿನಯಕುಮಾರ್ ಸೊರಕೆ ಮಾತನಾಡಿ, ಜ್ಞಾನೇಶಕುಮಾರ್ ಎಂಬ ಕೇರಳ ಕೇಡರ್‌ನ ಅಧಿಕಾರಿ ಮಾಡಿರುವ ಕಿತಾಪತಿ ಹಲವು, 370ನೇ ವಿಧಿ ರದ್ದು, ಶ್ರೀರಾಮ ಮಂದಿರ ಟ್ರಸ್ಟ್‌ಗೆ ಕಳ್ಳರನ್ನು ನುಗ್ಗಿಸಿ ಹುಂಡಿ ಕಳ್ಳತನ ಮಾಡಿಸಿದ್ದು ಸೇರಿದಂತೆ ಹಲವು ಆರೋಪಗಳು ಇವರ ಮೇಲಿದೆ. ಕಳೆದ 10 ತಿಂಗಳಲ್ಲಿ 14 ಬಾರಿ ಮುಖ್ಯಚುನಾವಣಾಆಯುಕ್ತರ ನಡೆ ಪ್ರತಿಭಟಿಸಿ ಕೇಂದ್ರಕ್ಕೆ ಇತರೆ ಆಯುಕ್ತರು ಪತ್ರ ಬರೆದಿದ್ದರೂ ಯಾವುದೇ ಕ್ರಮಆಗಿಲ್ಲ. ಏಕಪಕ್ಷೀಯವಾಗಿ ಬಿಜೆಪಿಯ ಕಾರ್ಯಕರ್ತನಂತೆ ಮುಖ್ಯ ಚುನಾವಣಾ ಆಯುಕ್ತರು ವರ್ತಿಸಿದ್ದು, ಪ್ರಜಾಪ್ರಭುತ್ವವನ್ನು ಉಳಿಸಲು ಜೆನ್–ಜಿಗಳು ಮತ್ತೊಂದು ಸುತ್ತಿನ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ.ಅದೇ ರೀತಿ ಕಾಂಗ್ರೆಸ್ ಕಾರ್ಯಕರ್ತರು ಮತ್ತಷ್ಟು ತೀಷ್ಣಗೊಳಿಸುವ ಅಗತ್ಯವಿದೆ ಎಂದರು.

SP NEWS ಸಣ್ ಸುದ್ದಿ

"ನುಡಿ ಜಾತ್ರೆಯ ಸಿರಿಯಲ್ಲಿ ತುಮಕೂರು ದಸರಾ"



ಸೂರ್ಯಪ್ರಗತಿನ್ಯೂಸ್.ಕಾಂ

ಬನ್ನಿ ಬನ್ನಿ ನಮ್ಮ ತುಮಕೂರಿಗೆ
ನುಡಿ ಜಾತ್ರೆಯ ಸಿರಿ ಮನೆಯೂರಿಗೆ
ಸಾಹಿತ್ಯ ಯಾತ್ರೆಯ ಸವಿ ಗೂಡಿಗೆ
ಎಲ್ಲರೂ ಕೂಡಿ ಕನ್ನಡ ತಾಯಿಗೆ ಅರ್ಪಿಸೋಣ ಮಲ್ಲಿಗೆ...
ದಸರಾ ಹಬ್ಬದ ಸಂಭ್ರಮದ ಸಿರಿ
ತುಮಕೂರಿಗಿಂದು ತಂದಿದೆ ಒಂದು ಹೆಮ್ಮೆಯ ಗರಿ
ಬಂಧುಗಳೇ ಬಂದು ಹಾರೈಸಿರಿ
ನಮ್ಮ ನಾಡು ನುಡಿಯ ತೇರನ್ನು ಎಳೆದು ಹರಿಸಿರಿ...
ತುಮಕೂರು ನಮ್ಮ ಹೆಮ್ಮೆಯ ನಾಡು
ಕಲೆ–ಸಂಸ್ಕೃತಿಯ ಸೊಗಡಿನ ಬೀಡು
ದಸರಾ ಬಂದರೆ ಕಳೆಗಟ್ಟುವ ರೋಡು
ಸಂಭ್ರಮ ತುಂಬುವುದು ಮನೆ–ಮನೆಯ ಗೂಡು..!
ಎಲ್ಲೆಡೆ ದಸರಾ ದೀಪಗಳು ಬೆಳಗಲಿ
ಡೋಲು–ತಾಳಗಳು ಮೊಳಗಲಿ
ಕಲೆ–ಸಂಸ್ಕೃತಿಯ ಬಣ್ಣ ತುಂಬಲಿ,
ನಮ್ಮ ತುಮಕೂರು ದಸರಾ ಕಳೆಗಟ್ಟಲಿ..!
ನವರಾತ್ರಿಯ ನಾದ ಮೊಳಗಲಿ
ಭಕ್ತಿಯ ಭಾವವು ತುಂಬಿ ತುಳುಕಲಿ
ದೇವಿಯ ಕೃಪೆಯ ಮಳೆ ಸುರಿಯಲಿ,
ತುಮಕೂರಿನ ಕೀರ್ತಿ ಎತ್ತೆತ್ತರಕ್ಕೆ ಏರಲಿ..!
ಸಿದ್ದಗಂಗೆಯ ಪವಿತ್ರ ಮಠದಲ್ಲಿ
ಜ್ಞಾನದ ಬೆಳಕಿನ ಮಹಾ ಪೀಠದಲಿ
ಅನ್ನ–ಅಕ್ಷರದ ದಾಸೋಹದಲಿ
ನಡೆದಾಡುವ ದೇವರಾದರು ನಮ್ಮ ತುಮಕೂರಿನಲ್ಲಿ..!
ಸೇವೆಯ ದಾರಿಯನ್ನು ತೋರಿದವರಲ್ಲಿ
ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ನಾಮವು
ಇಂದಿಗೂ ಮೊಳಗುತಿದೆ ಜಗದಲಿ..!
ಅನ್ನ ಕೊಟ್ಟರು, ಅಕ್ಷರ ಕೊಟ್ಟರು,
ಅಸಹಾಯಕರಿಗೆ ಆಸರೆ ಕೊಟ್ಟರು, ಸಾವಿರಾರು ಮಕ್ಕಳ ಬಾಳು ಬೆಳಗಿಸಿ
ಜ್ಞಾನ ದೀಪವನ್ನು ಹಚ್ಚಿ ಹೋದರು..!
ದೇವರಾಯನ ದುರ್ಗದ ಬೆಟ್ಟದಲ್ಲಿ
ಹಸಿರು ಹೊದ್ದಿರುವ ಪ್ರಕೃತಿಯಲಿ
ನರಸಿಂಹ ಸ್ವಾಮಿಯ ಪವಿತ್ರ ನೆಲೆಯಲಿ
ಭಕ್ತರ ಮನದಲ್ಲಿ ಮೂಡಿಸುವ ಭಕ್ತಿಯಲಿ
ಭೋಗ ನರಸಿಂಹನ ದಿವ್ಯದರ್ಶನದಲಿ
ಯೋಗ ನರಸಿಂಹನ ಪವಿತ್ರ ಸ್ಪಂದನದಲಿ
ಬೆಟ್ಟದ ಗಾಳಿಯ ತಂಪಿನಲಿ,
ನಮ್ಮ ಮನವನ್ನ ಇರಿಸುವುದು ನೆಮ್ಮದಿಯಲ್ಲಿ..!
ಶಿಕ್ಷಣವೆಂದರೆ ಬೆಳಕಿನ ದಾರಿ
ವಿದ್ಯಾರ್ಥಿಗಳ ಬಾಳಿಗೆ ಹೊಸ ಸವಾರಿ
ಶಾಲಾ–ಕಾಲೇಜುಗಳ ಜ್ಞಾನದ ಸಿರಿ,
ನಮ್ಮ ತುಮಕೂರಿಗೆ ತಂದಿದೆ ಇಂದು ಹೆಮ್ಮೆಯ ಗರಿ..!



ರಂಜು ಕನ್ನಡತಿ
ಯುವ ಕವಯತ್ರಿ ಬೆಳ್ಳಾರ ಹುಳಿಯಾರು ಎಂ.ಎ ಅರ್ಥಶಾಸ್ತ್ರ & ಸಂಶೋಧನಾ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ



ತುಮಕೂರು ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಗೆ ನೂತನ ಜಂಟಿ ನಿರ್ದೇಶಕರಾಗಿ ಡಾ. ಚಂದ್ರಕುಮಾರ್ ಹೆಚ್. ಎಲ್ ರವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಪ್ರಯುಕ್ತ ನೂತನ ಅಧಿಕಾರಿಗಳನ್ನು ಭೇಟಿ ಮಾಡಿ ಶುಭಕೋರಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷರು ಹಾಗೂ ಜಯನುಡಿ ದಿನಪತ್ರಿಕೆ ಸಂಪಾದಕರಾದ ಜಯನುಡಿ ಜಯಣ್ಣ, ಹಿರಿಯ ಮುಖಂಡರಾದ ರಾಜಣ್ಣ ಜಿ ಚಿಕ್ಕಸಾರಂಗಿ, ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಹಾಗೂ ಅಖಿಲ ಭಾರತ ಡಾ. ಅಂಬೇಡ್ಕರ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಎನ್.ಕೆ ನಿಧಿ ಕುಮಾರ್, ಗೂಳರಿವೆ ನಾಗರಾಜು, ವೆಂಕಟೇಶ್ ಚೇಳೂರು, ಅಂಗಡಿ ಚಂದ್ರಣ್ಣ, ಇತರರು ಉಪಸ್ಥಿತರಿದ್ದರು.

ಪ್ರವಾಸೋದ್ಯಮ ಅಭಿವೃದ್ಧಿ : ಕೃತಕ ಬುದ್ಧಿಮತ್ತೆಯ ಸಮರ್ಥ ಬಳಕೆಗೆ ಸಲಹೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಪ್ರವಾಸೋದ್ಯಮ ಅಭಿವೃದ್ಧಿಗೆ ಕೃತಕ ಬುದ್ಧಿಮತ್ತೆ (ಎಐ)ಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸಿ. ಗೋಪಾಲ್ ಸಲಹೆ ನೀಡಿದರು. ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಭಾನುವಾರ ಸಿದ್ದಗಂಗಾ ಮಠದಲ್ಲಿ ಡಿಜಿಟಲ್ ಕಾರ್ಯಸೂಚಿ ಮತ್ತು ಕೃತಕ ಬುದ್ಧಿಮತ್ತೆ ಬಳಸಿ ಪ್ರವಾಸೋದ್ಯಮದ ಮರುಸೃಷ್ಟಿ(Digital Agenda and Artificial Intelligence to redesign Tourism) ಎಂಬ ಸಂದೇಶದಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಪ್ರವಾಸೋದ್ಯಮ ಎಂಬ ಮರವನ್ನು ಪೋಷಿಸುವುದರಿಂದ ಪ್ರವಾಸೋದ್ಯಮದ ಅಭಿವೃದ್ಧಿಯನ್ನಷ್ಟೇ ಅಲ್ಲದೆ, ಪ್ರಕೃತಿ ಮತ್ತು ತಂತ್ರಜ್ಞಾನದ ನಡುವಿನ ಸಮತೋಲನವನ್ನು ಸಾಧಿಸಬಹುದಾಗಿದೆ ಎಂದು ತಿಳಿಸಿದರು. ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಸಂಜೀವಕುಮಾರ ಮಾತನಾಡಿ, ಪ್ರವಾಸಿ ತಾಣಗಳಲ್ಲಿ ಅತಿಯಾದ ಜನದಟ್ಟಣೆಯನ್ನು ನಿಯಂತ್ರಿಸಲು ಎಐ ಮುನ್ಸೂಚನೆಗಳನ್ನು ನೀಡಲಿದೆ. ಯಾವುದೇ ಪ್ರದೇಶದ



ಪ್ರವಾಸಿಗರು ಸ್ಥಳೀಯರೊಂದಿಗೆ ಸುಲಭವಾಗಿ ಸಂವಹನ ನಡೆಸಲು AI ಆಧಾರಿತ ರಿಯಲ್ ಟೈಮ್ ಅನುವಾದಕಗಳು ನೆರವಾಗುತ್ತವೆ. ಅಲ್ಲದೆ, ಪ್ರವಾಸಿ ತಾಣಗಳಲ್ಲಿನ ಮಾಲಿನ್ಯ ಮತ್ತು ಸಂಪನ್ಮೂಲ(ನೀರು, ವಿದ್ಯುತ್)ಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಎಐ ತಂತ್ರಜ್ಞಾನ ಬಳಕೆಯಾಗುತ್ತದೆ ಎಂದು ತಿಳಿಸಿದರು.

ಸಿದ್ದಗಂಗಾ ಮಠದ ಉಪಾಧ್ಯಕ್ಷರು ಶ್ರೀ ಶ್ರೀ ಶ್ರೀ ಶಿವಸಿದ್ದೇಶ್ವರ ಸ್ವಾಮಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮಧುಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕ ವೇದಲಕ್ಷ್ಮಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕೃತಕ ಬುದ್ಧಿಮತ್ತೆಯ ಪ್ರಮುಖ ಕೊಡುಗೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಶ್ರೀ ಸಿದ್ದಾರ್ಥ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಎಂ.ಬಿ.ಎ ಪ್ರಾಂಶುಪಾಲ ಡಾ: ಅಜಮುತ್ತ ಅವರು ಕಾರ್ಯಕ್ರಮ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ವಿಶ್ವ ಪ್ರವಾಸೋದ್ಯಮ ದಿನಚಾರಣೆಯ ಅಂಗವಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಛಾಯಾ ಚಿತ್ರ, ರಂಗೋಲಿ ಸ್ಪರ್ಧೆ, ರಸ ಪ್ರಶ್ನೆ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಭಾಷಣಾ ಸ್ಪರ್ಧೆಯಲ್ಲಿ ವಿಜೇತರಾಗಿದ್ದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ವಿತರಿಸಿ ಗೌರವಿಸಲಾಯಿತು. ನಗರದ ಅರ್ಬನ್ ರೆಸಾರ್ಟ್‌ನಿಂದ ಸಿದ್ದಗಂಗಾ ಮಠದವರೆಗೆ ಕೃತಕ ಬುದ್ಧಿಮತ್ತೆ ಬಳಸಿ ಪ್ರವಾಸೋದ್ಯಮದ ಮರುಸೃಷ್ಟಿ ಮಾಡುವ ಕುರಿತು ಜಾಗೃತಿ ಜಾಥಾ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ಸೇರಿದಂತೆ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಧುಗಿರಿ:ಪಿಎಂ ಕಿಸಾನ್ ಯೋಜನೆಯ ಹಣ ಪಡೆಯಲು ಅರ್ಹ ರೈತರು ಬಯೋಮೆಟ್ರಿಕ್ ಆಧಾರಿತ ಇ–ಕೆವೈಸಿ ಮಾಡಿಸುವುದು ಕಡ್ಡಾಯವಾಗಿರುತ್ತದೆ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಚನ್ನಕೇಶವಮೂರ್ತಿ ಹೇಳಿದರು.

ಇ–ಕೆವೈಸಿ ಮಾಡಿಸಿಕೊಳ್ಳಲು ಎರಡು ವಿಧಾನದಲ್ಲಿ ಅವಕಾಶ ಇರುತ್ತದೆ. ಮೊದಲನೆಯದಾಗಿ ರೈತರು ಬಯೋಮೆಟ್ರಿಕ್ ಇ–ಕೆವೈಸಿ ಮಾಡಿಸಿಕೊಳ್ಳಬಹುದು. ಬಯೋಮೆಟ್ರಿಕ್ ಆಧಾರಿತ ಇ–ಕೆವೈಸಿ ಸಾಮಾನ್ಯ ಸೇವಾ ಕೇಂದ್ರ, ಕರ್ನಾಟಕ ಗ್ರಾಮ ಒನ್,.ಪಂಚಾಯ್ತಿಗಳಲ್ಲಿ ನಿಯೋಜನೆ ಆಗಿರುವ ಕೃಷಿ ಸಖಿಯರು ಹಾಗೂ ಹೋಬಳಿಗಳ ರೈತ ಸಂಪರ್ಕ ಕೇಂದ್ರಗಳಲ್ಲಿ ಮಾಡಿಸಿಕೊಳ್ಳಬಹುದು ಎಂದರು.

ಇ–ಕೆವೈಸಿ ಮಾಡಿಸದ ಫಲಾನುಭವಿಗಳಿಗೆ ಕಂತಿನ ಹಣ ಜಮೆಯಾಗುವಲ್ಲಿ ಅಡಚಣೆಯಾಗುವ ಸಾಧ್ಯತೆ ಇದೆ. ಪಿ ಎಂ ಕಿಸಾನ್ ಯೋಜನೆಯ 24ನೇ ಕಂತು ಸೆಪ್ಟೆಂಬರ್‌ನಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ

ಮನುಷ್ಯನ ಪ್ರೀತಿಯ ಪ್ರಾಣಿಯಾಗಿರುವ ಸಾಕು ನಾಯಿ–ಬೆಕ್ಕುಗಳಿಗೆ ರೇಬಿಸ್ ಲಸಿಕೆ ಕಡ್ಡಾಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು; ಮನುಷ್ಯನ ಪ್ರೀತಿಯ ಪ್ರಾಣಿಯಾಗಿರುವ ನಾಯಿ ಮತ್ತು ಬೆಕ್ಕುಗಳಿಂದ ರೇಬಿಸ್ ರೋಗ ಹರಡದಂತೆ ತಡೆಗಟ್ಟಲು ವರ್ಷಕ್ಕೊಮ್ಮೆ ರೇಬಿಸ್ ಲಸಿಕೆಯನ್ನು ಹಾಕಿಸಬೇಕು ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ: ಹೆಚ್.ಎಂ. ಶಿವಪ್ರಸಾದ್ ತಿಳಿಸಿದರು.

ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ ನಗರದ ಪಶು ಆಸ್ಪತ್ರೆ ಆವರಣದಲ್ಲಿ ಜಿಲ್ಲಾ ಪಂಚಾಯ್ತಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಹಾಗೂ ಮರಳೂರಿನ ಇನ್ನರ್ ವ್ಹೀಲ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಸೋಮವಾರ ಏರ್ಪಡಿಸಿದ್ದ ಉಚಿತ ರೇಬಿಸ್ ಲಸಿಕಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ರೇಬಿಸ್ ರೋಗದ ವಿರುದ್ಧ ಉಚಿತ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಜಿಲ್ಲೆಯಲ್ಲಿ 21ನೇ ಜಾನುವಾರು ಗಣತಿ ಪ್ರಕಾರ ಸುಮಾರು



38 ರಿಂದ 40 ಸಾವಿರ ಸಾಕು ನಾಯಿ ಮತ್ತು ಬೆಕ್ಕುಗಳಿವೆ. ಪ್ರಾಣಿಜನ್ಯ ರೋಗವು ಪ್ರಾಣಿಗಳಿಂದ ಮನುಷ್ಯನಿಗೆ ಬರುವ ರೋಗವಾಗಿದೆ. ಈ ರೋಗ ಬಂದರೆ ಚಿಕಿತ್ಸೆ ಇಲ್ಲ ಎಂದರು. ಪ್ರಾಣಿಗಳಲ್ಲಿ ರೇಬಿಸ್ ರೋಗ ದೃಢಪಟ್ಟರೆ ಸಾಯಿಸುವುದನ್ನು ಬಿಟ್ಟರೆ ಅದಕ್ಕೂ ಚಿಕಿತ್ಸೆ ಇಲ್ಲ. ಹಾಗಾಗಿ ಪ್ರತಿಯೊಬ್ಬರೂ ಸಹ ತಮ್ಮ ಸಾಕು ನಾಯಿಗಳು ಹಾಗೂ ಬೆಕ್ಕುಗಳಿಗೆ ವರ್ಷಕ್ಕೊಮ್ಮೆ ರೇಬಿಸ್ ಲಸಿಕೆಯನ್ನು ತಪ್ಪದೇ ಹಾಕಿಸಬೇಕು ಎಂದು ಮನವಿ ಮಾಡಿದ ಅವರು, ಪ್ರತಿಯೊಬ್ಬರೂ ಸಹ ಉಚಿತ ರೇಬಿಸ್ ಲಸಿಕಾ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಜಿಲ್ಲೆಯಲ್ಲಿ ಸುಮಾರು 80,000 ಬೀದಿನಾಯಿಗಳಿವೆ. ಮಹಾನಗರ ಪಾಲಿಕೆ, ಪುರಸಭೆ, ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲೂ ಸಹ ಬೀದಿ ನಾಯಿಗಳನ್ನು ಹಿಡಿದು ರೇಬಿಸ್ ಲಸಿಕೆ ಹಾಕುವಂತೆ ಸರ್ಕಾರದ ಆದೇಶವಿದೆ. ಈ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಂಡರೆ ಬೀದಿ ನಾಯಿಗಳಿಗೆ ಲಸಿಕೆ ಹಾಕಲು ಇಲಾಖೆ ಸಿದ್ಧವಿದೆ ಎಂದರು.

ತುಮಕೂರು ನಗರದಲ್ಲಿ 2500 ಬೀದಿ ನಾಯಿಗಳನ್ನು ಹಿಡಿದು ಈಗಾಗಲೇ ರೇಬಿಸ್ ಲಸಿಕೆ ಹಾಕಲಾಗಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ನಾಯಿಗಳಿಗೆ ಈ ಲಸಿಕೆ ಹಾಕಲಾಗುವುದು. ಈ ಲಸಿಕಾ ಅಭಿಯಾನದಲ್ಲಿ ಪ್ರಾಣಿಪ್ರಿಯರು ಮತ್ತು ನಾಯಿ ಸಾಕಾಣಿಕೆದಾರರು ಕಡ್ಡಾಯವಾಗಿ ಪಾಲ್ಗೊಂಡು ರೇಬಿಸ್ ತಡೆಗಟ್ಟಲು ಮುಂದಾಗಬೇಕು ಎಂದು ಅವರು ತಿಳಿಸಿದರು.

ಇನ್ನರ್ ವ್ಹೀಲ್ ಕ್ಲಬ್‌ನ ಪ್ರಿಯಾ ಪ್ರದೀಪ್ ಮಾತನಾಡಿ, ಕಳೆದ 12 ವರ್ಷಗಳಿಂದ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯ ಸಹಯೋಗದಲ್ಲಿ ಇನ್ನರ್ ವ್ಹೀಲ್ ಕ್ಲಬ್ ವಿಶ್ವ ರೇಬಿಸ್ ದಿನಾಚರಣೆಯನ್ನು ಆಚರಿಸುತ್ತಾ ಬಂದಿದೆ ಎಂದು ಹೇಳಿದರು. ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ರುದ್ರಪ್ರಸಾದ್ ಮಾತನಾಡಿ, ವೈರಸ್‌ನಿಂದ ಬರುವಂತಹ ಈ ರೇಬಿಸ್ ರೋಗವು ಪ್ರಾಣಿಗಳಿಂದ ಮನುಷ್ಯನಿಗೆ ಹರಡಲಿದ್ದು, ಈ ರೋಗಕ್ಕೆ ಯಾವುದೇ ರೀತಿಯ ಚಿಕಿತ್ಸೆ ಇಲ್ಲ. ಹುಚ್ಚು ನಾಯಿಗಳಿಂದ ಅತಿ ಹೆಚ್ಚು ಹರಡುವ ರೋಗ ಇದಾಗಿದೆ. ಮನುಷ್ಯನಿಗೆ ಈ ರೋಗ ಹರಡಿದರೆ ಯಾವುದೇ ರೀತಿಯ ಚಿಕಿತ್ಸೆ ಇಲ್ಲ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಸಾಕು ನಾಯಿ ಮತ್ತು ಬೆಕ್ಕುಗಳಿಗೆ ಉಚಿತವಾಗಿ ಲಸಿಕೆ ಹಾಕಿಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಡಾ. ವೆಂಕಟೇಶಬಾಬು ರೆಡ್ಡಿ, ಡಾ. ವಿಜಯಲಕ್ಷ್ಮಿ, ಡಾ. ಅನುಪಮಾ, ಡಾ. ಜಯಂತಿ, ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ಲತಾ, ಕಾರ್ಯದರ್ಶಿ ರಶ್ಮಿ, ನಿರ್ಮಲಗೌಡ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಸ್ವಯಂಪ್ರೀತಿಯ ಪರಿಕಲ್ಪನೆ ಇದ್ದಾಗ ಆಮಿಷಗಳಿಂದ ದೂರವಿರಲು ಸಾಧ್ಯ: ಬಿ. ಜಯಂತಕುಮಾರ್

ಸೂರ್ಯಪ್ರಗತಿನ್ಯೂಸ್.ಕಾಂ

ತಮ್ಮ ಗುರಿಯನ್ನು ಸಾಧಿಸುವ ಹಠ ಮತ್ತು ಸ್ವಯಂಪ್ರೀತಿಯ ಪರಿಕಲ್ಪನೆ ಇದ್ದಾಗ ಅಪ್ರಾಪ್ತವಯಸ್ಸಿನ ವಿದ್ಯಾರ್ಥಿ/ನಿಯರು ಇತರರು ಒಡ್ಡುವ ಆಮಿಷಗಳಿಗೆ ಬಲಿಬೀಳುವುದು ಸಾಧ್ಯವಿಲ್ಲ ಎಂದು ತುಮಕೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ. ಜಯಂತಕುಮಾರ್ ಹೇಳಿದರು. ಅವರು ವಿದ್ಯಾನಿಧಿ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಮತ್ತು ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಪೋಕ್ಸೋ ಕಾಯ್ದೆ ಮತ್ತು ಮಾದಕವಸ್ತು ನಿಷೇಧ ಕಾಯ್ದೆ ಬಗ್ಗೆ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕೆಲವು ವ್ಯಕ್ತಿಗಳ ಬಗ್ಗೆ ಹಿಂದುಮುಂದು ಯೋಚಿಸದೇ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ಅನಗತ್ಯ ತೊಂದರೆಗಳನ್ನು ಆಹ್ವಾನಿಸಿದಂತಾಗುತ್ತದೆ. ಪರಿಚಯ ಇಲ್ಲದವರೊಂದಿಗೆ ಸಲುಗೆ ಬೇಡ. ಪರವಾನಗಿ ವಿನಾ ಗಾಡಿ ಚಾಲಾಯಿಸುವುದರಿಂದ ಆಪತ್ತು ಎದುರಾಗುತ್ತದೆ.



ಮೊಬೈಲ್‌ಗಳನ್ನು ವಿದ್ಯಾಭ್ಯಾಸಕ್ಕೆ ಪೂರಕವಾಗಿ ಬಳಸುವುದರ ಬದಲು ಅನಗತ್ಯವಾಗಿ ರೀಲ್ಸ್‌ಗಳನ್ನು ನೋಡಲು ಬಳಸಿದರೆ ಬದುಕು ಎಡವುವ ಸಾಧ್ಯತೆ ಇರುತ್ತದೆ. ಬೇರೆಯವರ ಸಂತೋಷವನ್ನು ನೋಡಿ ಕೊರಗುವುದರ ಬದಲು ನಮ್ಮ ಬದುಕಿನಲ್ಲಿ ಪಡೆದ ಸೌಭಾಗ್ಯದ ಕುರಿತು ಸಂತೋಷ ಹೊಂದುವುದನ್ನು ಕಲಿಯಬೇಕು ಎಂದು ಬಿ. ಜಯಂತಕುಮಾರ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇದರ ಸದಸ್ಯ ಕಾರ್ಯದರ್ಶಿ ಹೆಚ್. ಶಶಿಧರ ಶೆಟ್ಟಿ, "ಇಂದು ರಾಷ್ಟ್ರಗಳನ್ನು ಸೋಲಿಸಲು ಬೇರಾವುದೇ ರೀತಿಯ ಯುದ್ಧಗಳ ಅಗತ್ಯವಿಲ್ಲ; ಅಲ್ಲಿಯ ಯುವಸಮೂಹವನ್ನು ಮಾದಕವಸ್ತುಗಳ ದಾಸರನ್ನಾಗಿ ಮಾಡಿದರೆ ಇಡೀ ದೇಶವೇ ಸರ್ವನಾಶವಾಗುತ್ತದೆ. ಈ ಎಚ್ಚರ ಪ್ರತಿಯೊಬ್ಬರಲ್ಲೂ ಇರಬೇಕು. ಅಪ್ರಾಪ್ತವಯಸ್ಕರ ಒಂದು ಸಣ್ಣ ತಪ್ಪಿನಿಂದ ಇಡೀ ಕುಟುಂಬ ಬೀದಿಗೆ ಬೀಳಬಹುದು ಅಥವಾ ಗೌರವವನ್ನು ಕಳೆದುಕೊಳ್ಳಬಹುದು. ನಮ್ಮ ನೆಲದ ಕಾನೂನನ್ನು ತಿಳಿದಿರುವುದು ಎಲ್ಲರ ಕರ್ತವ್ಯ. ನಮ್ಮ ಹಕ್ಕುಗಳನ್ನು ತಿಳಿದುಕೊಂಡಂತೆ ಕರ್ತವ್ಯಗಳನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬರಿಗೂ ಅತ್ಯಗತ್ಯ" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ವಿದ್ಯಾವಾಹಿನಿ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಎನ್. ಬಿ. ಪ್ರದೀಪ್ ಕುಮಾರ್, ವಿದ್ಯಾರ್ಥಿಗಳು ಮೊದಲು ತಮ್ಮನ್ನು ತಾವು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಆಗ ಇತರರನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಪೋಕ್ಸೊ ಅಥವಾ ಮಾದಕವಸ್ತುಗಳಿಗೆ ಸಂಬಂಧಿಸಿದಂತೆ ಏನೇ ಸಮಸ್ಯೆಗಳಿದ್ದರೂ ವಿದ್ಯಾರ್ಥಿ/ನಿಯರು ಧೈರ್ಯವಾಗಿ ಪ್ರಕಟಪಡಿಸಬೇಕು. ಕಾನೂನು ಪ್ರಾಧಿಕಾರದೊಂದಿಗೆ ಸಂಸ್ಥೆ ಸದಾ ಇರುತ್ತದೆ ಎಂದು ಹೇಳಿದರು.

ಬಿ. ಜಯಂತಕುಮಾರ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. "ದೌರ್ಜನ್ಯದ ವಿರುದ್ಧ ಎತ್ತುವ ಒಂದು ಸಣ್ಣ ಧ್ವನಿ ಬಹುದೊಡ್ಡ ಪ್ರತಿಧ್ವನಿಯಾಗಿ ಮಾರ್ದನಿಸಬಹುದು" ಎಂಬ ಧ್ಯೇಯವಾಕ್ಯದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ತುಮಕೂರಿನ ಸದಸ್ಯ ಕಾರ್ಯದರ್ಶಿಗಳು ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಾದ ಲೋಕೇಶ ಧನಪಾಲ ಹವಲೆ, ವಿದ್ಯಾನಿಧಿ ಕಾಲೇಜಿನ ಪ್ರಾಂಶುಪಾಲ ಸಿದ್ಧೇಶ್ವರಸ್ವಾಮಿ ಎಸ್. ಆರ್., ಸುಬ್ರಹ್ಮಣ್ಯ ಡಿ. ಕೆ., ಉಪಪ್ರಾಂಶುಪಾಲರಾದ ವೇದಮಯ, ಪೂರ್ಣಗಂಗಾ ಉಪಸ್ಥಿತರಿದ್ದರು.

ಕನಿಷ್ಠ ಕೂಲಿ, ಗುತ್ತಿಗೆ ಕಾರ್ಮಿಕರ ಖಾಯಂಮಾತಿ ಶಾಸನಕ್ಕೆ ಒತ್ತಾಯಿಸಿ ಶಾಸಕರಿಗೆ ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ

ಸಿಐಟಿಯು ರಾಜ್ಯ ಸಮಿತಿ ನೇತೃತ್ವದಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳ ರದ್ದತಿ, ತಡೆಹಿಡಿದ ಕನಿಷ್ಠ ವೇತನ ಜಾರಿ, ಗುತ್ತಿಗೆ–ಸ್ಕೀಮ್ ನೌಕರರ ಖಾಯಂಗೊಳಿಸುವಿಕೆ ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಸೆಪ್ಟೆಂಬರ್ 8ರಂದು 184 ಸಂಘಗಳ 25 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆ ನಡೆಸಿದರು. ಕಾರ್ಮಿಕ ಸಚಿವರು ಮನವಿ ಸ್ವೀಕರಿಸಿದ್ದರು. ಸೆಪ್ಟೆಂಬರ್ 15ರಂದು ಮುಖ್ಯಮಂತ್ರಿಗಳು ಮಾತುಕತೆಗೆ ಒಪ್ಪಿದ ನಂತರ ಹೋರಾಟ ಹಿಂಪಡೆಯಲಾಗಿತ್ತು. ಆದರೆ ಸಭೆ ನಡೆಸದೆ ಸರ್ಕಾರ ಮಾತು ಉಳಿಸಿಕೊಳ್ಳದಿರುವುದು ಖಂಡನೀಯ. ಹೀಗಾಗಿ ಸೆಪ್ಟೆಂಬರ್ 25ರಿಂದ ಶಾಸಕರು/ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ.

ಮುಖ್ಯಬೇಡಿಕೆಗಳು: ಒಂದು, ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ತಿದ್ದುಪಡಿ ತಂದು ರಾಜ್ಯದ ಕಾರ್ಮಿಕ ಹಿತಕ್ಕೆ ಅನುಗುಣವಾಗಿ ನಿಯಮ ರೂಪಿಸಬೇಕು. ಎರಡು, ಮೇ 22, 2026ರ



ಕನಿಷ್ಠ ವೇತನ ಅಧಿಸೂಚನೆಯನ್ನು ತಡೆಹಿಡಿದು ಸಮಿತಿ ರಚಿಸಿರುವುದು ಕಾರ್ಮಿಕ ದ್ರೋಹ; 19 ಕೈಗಾರಿಕೆಗಳಿಗೆ ಅನ್ವಯವಾಗದಿರುವುದನ್ನು ಸರಿಪಡಿಸಿ, 2022ರಿಂದ ಪೂರ್ವಾನ್ವಯ ನೀಡಬೇಕು. ಮೂರು, ಅಂಗನವಾಡಿ, ಅಕ್ಷರದಾಸೋಹ, ಆಶಾಕಾರ್ಯಕರ್ತೆಯರಿಗೆ ಕನಿಷ್ಠ ವೇತನ ಮತ್ತು ಕಾನೂನು ಸವಲತ್ತು ನೀಡಬೇಕು; ಭರವಸೆಯಂತೆ ಬಿಸಿಯೂಟ ರೂ.7,000, ಆಶಾ ರೂ.10,000, ಅಂಗನವಾಡಿ ರೂ.15,000 ನೀಡಬೇಕು. ನಾಲ್ಕು, ಇಎಸ್ಐ, ಇಪಿಎಫ್, ಗ್ರಾಚ್ಯುಟಿ, ಬೋನಸ್‌ಗಳ ವೇತನ ಮಿತಿಗಳನ್ನು ರದ್ದುಗೊಳಿಸಬೇಕು. ಐದು, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಇ–ಶ್ರಮ್ ಕಾರ್ಡುದಾರರಿಗೆ ಕಲ್ಯಾಣ ಯೋಜನೆ ಜಾರಿಗೊಳಿಸಬೇಕು. ಆರು, ಗುತ್ತಿಗೆ/ಹೊರಗುತ್ತಿಗೆ ಪದ್ಧತಿ ರದ್ದು ಮಾಡಿ, ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಕನ್ಫರ್ಮೆಂಟ್ ಆಫ್ ಪರ್ಮನೆಂಟ್ ಸ್ಟೇಟಸ್ ಕಾಯಿದೆ ಜಾರಿಗೆ ತರಬೇಕು. ಏಳು, ರೈತರ ಭೂಸ್ವಾಧೀನ ಕೈಬಿಟ್ಟು ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಂಬಲ ಬೆಲೆ ನೀಡಬೇಕು. ಎಂಟು, ಆಹಾರ, ಆರೋಗ್ಯ ಶಿಕ್ಷಣ, ವಿದ್ಯುತ್, ಸಾರಿಗೆ ಖಾಸಗೀಕರಣ ನಿಲ್ಲಿಸಿ, ವಸತಿ ರಹಿತ ಕಾರ್ಮಿಕರಿಗೆ ವಸತಿ, ಬಿಪಿಎಲ್ ಆದಾಯ ಮಿತಿ ಹೆಚ್ಚಿಸಬೇಕು. ಈ ವಿಷಯವನ್ನು ವಿಧಾನಸಭೆಯಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯಬೇಕು. ಸಿಐಟಿಯು ಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿ, ಕಾರ್ಮಿಕ ಸಚಿವರು ಹಾಗೂ ಅಧಿಕಾರಿಗಳ ಸಭೆ ಕೂಡಲೇ ನಿಗದಿಯಾಗದಿ ಮಾಡಲು ಸರ್ಕಾರಕ್ಕೆ ಒತ್ತಾಯಿಸಿ ಕಾರ್ಮಿಕರ ಹಕ್ಕು ಭದ್ರತೆ ಮತ್ತು ಘನತೆ ರಕ್ಷಿಸುವುದು ನಿಮ್ಮ ಮತ್ತು ಸರ್ಕಾರದ ಜವಾಬ್ದಾರಿ ಎಂದು ಮನವಿ ಪತ್ರವನ್ನು ನೀಡಲಾಯಿತ್ತು. ಈ ಸಂಧರ್ಭದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರು ತುಮಕೂರು ಜಿಲ್ಲಾ ಅಧ್ಯಕ್ಷರಾದ ಸೈಯದ್ ಮುಜೀಬ್, ಜಿಲ್ಲಾಪ್ರಧಾನ ಕಾರ್ಯದರ್ಶಿ ಜಿ. ಕಮಲ, ಜಿಲ್ಲಾ ಖಜಾಂಚಿ ಲೋಕೇಶ್, ಜಿಲ್ಲಾಸಂಚಾಲಕರು ರಂಗಧಾಮಯ್ಯ, ಸುಜಿತ್ ನಾಯಕ, ಶಿವಕುಮಾರ ಸ್ವಾಮಿ, ಅಂಗನವಾಡಿ ನೌಕರರ ಸಂಘದ ಗೌರಮ್ಮ, ಜುಬೀನ್ ಬಾನು, ವಿಶ್ವವಿದ್ಯಾನಿಲಯದ ಗುತ್ತಿಗೆಕಾರ್ಮಿಕ ಸದಸ್ಯರಾದ ಗೌರಮ್ಮ ಗಂಗಮ್ಮ ಹಮಾಲಿ ಕಾರ್ಮಿಕ ಸಂಘದ ನಾಗರಾಜು ರಾಮಾಂಜಿನಯ್ಯ ಕಾಣಬಹುದು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

4 ಸಾವಿರ ಕಿ.ಮಿ ಪರ್ಯಟನೆ ಮಾಡಿ ಸೈಕಲ್ ನೊಂದಿಗೆ ಬೆಟ್ಟ ಏರಿ " ವಿಶ್ವ ಪ್ರವಾಸೋದ್ಯಮ ದಿನ" ಆಚರಣೆ

ಮಧುಗಿರಿ:– ಪಟ್ಟಣದಲ್ಲಿರುವ ವಿಶ್ವ ವಿಖ್ಯಾತ ಏಕಶಿಲಾ ಬೆಟ್ಟವನ್ನು ಇಂಜಿನಿಯರ್ ಪದವೀಧರನೊಬ್ಬ ತಾನು 4 ಸಾವಿರ ಕಿ.ಮಿ ಪರ್ಯಟನೆ ಮಾಡಿದ್ದ ಸೈಕಲ್ ನೊಂದಿಗೆ ಬೆಟ್ಟವನ್ನು ಚಾರಣ ಮಾಡಿ ಭಾನುವಾರದಂದು " ವಿಶ್ವ ಪ್ರವಾಸೋದ್ಯಮ ದಿನ"ವನ್ನು ಆಚರಿಸಿಕೊಂಡಿದ್ದಾರೆ.

ಈತನನ್ನು ಚಾರಣದ ಬಗ್ಗೆ ಪತ್ರಕರ್ತರು ಕೇಳಿದಾಗ ನಾನು ಈ ಮುಂಚೆ ಈ ಬೆಟ್ಟವನ್ನು ಸಾಮಾನ್ಯವಾಗಿ ಆರು ಬಾರಿ ಚಾರಣ ಮಾಡಿದ್ದೆ, ಹಿಂದೆ ಬೆಟ್ಟದಲ್ಲಿ ಏಳು ಸುತ್ತಿನ ಕೋಟೆ –ಕೊತ್ತಲುಗಳನ್ನು ಕಟ್ಟುವ ವೇಳೆ ಕಲ್ಲುಗಳನ್ನು ಮತ್ತು ಗಾರೆಯನ್ನು ಹೇಗೆ ತೆಗೆದುಕೊಂಡು ಹೋಗಿದ್ದರು ಎಂಬ ಪ್ರಶ್ನೆ ನನ್ನಲ್ಲಿ ಸದಾ ಕಾಡುತ್ತಿತ್ತು, ನಾನು ಬೈಸಿಕಲ್ ನೊಂದಿಗೆ ಬೆಟ್ಟವನ್ನಿರಬೇಕೆಂಬ ಉದ್ದೇಶ ಇಂದು ಸಫಲವಾಗಿದೆಂದು ಚಾರಣಿಗ ತಿಳಿಸಿದರು.



ಈ ಬೆಟ್ಟವನ್ನು ಏರುವಾಗ ಸಾಮಾನ್ಯವಾಗಿ ನೀರಿನ ಬಾಟಲು, ಸೌತೆಕಾಯಿ, ತಿಂಡಿ ತಿನಿಸುಗಳು ತೆಗೆದುಕೊಂಡು ಹೋಗುವುದೆ ಸಾಹಸವಾಗಿರುವಂತಹ ಸಂದರ್ಭದಲ್ಲಿ, ಬೈಸಿಕಲ್ ಎತ್ತಿಕೊಂಡು ಬೆಟ್ಟವನ್ನೇರಿರುವುದು ಇದೇ ಪ್ರಥಮವಾಗಿದೆ.

ಹೆಜ್ಜೆಗಳು ವಿಫಲವಾಗುವ ಸ್ಥಳಗಳಲ್ಲಿ ಪೆಡಲ್ ಸವಾರಿ ಮಾಡುತ್ತಾ, ರಾಯಲಸೀಮಾದ ಯುವ ಎಂಜಿನಿಯರ್‌ಯೊಬ್ಬರು ಇಂತಹ ಕೆಲವು ಕಠಿಣ ಬೆಟ್ಟಗಳ ತುದಿಗಳನ್ನೇರಿ ಇತಿಹಾಸ ಮತ್ತು ಪರಂಪರೆಗೆ ಗೌರವ ಸಲ್ಲಿಸುತ್ತಿದ್ದಾರೆ.

ನೆರೆಯ ಶ್ರೀ ಸತ್ಯಸಾಯಿ ಜಿಲ್ಲೆಯ ಹಿಂದೂಪುರದ ಎಂಜಿನಿಯರ್ ಆಗಿರುವ ಸಾಯಿ ಕುಮಾರ್, ರಾಯಲ ಸೀಮೆಯ ಇತಿಹಾಸ ಮತ್ತು ಸಂಸ್ಕೃತಿಯ ಪ್ರಚಾರದೊಂದಿಗೆ ತೀವ್ರ ಸಾಹಸವನ್ನು ಸಂಯೋಜಿಸುವ ವಿಶಿಷ್ಟ ಸೈಕಲ್ ದಂಡಯಾತ್ರೆಗಳಿಗಾಗಿ ಈಗಾಗಲೆ ವ್ಯಾಪಕ ಗಮನ ಸೆಳೆದ್ದಾರೆ. ಇತ್ತೀಚೆಗೆ, ಸಾಯಿ ಕುಮಾರ್‌ಐದು ಶತಮಾನಗಳಷ್ಟು ಹಳೆಯದಾದ ಕೋಟೆ ತಾಣವಾದ ಐತಿಹಾಸಿಕ ಮಡಕಶಿರಾ ಬೆಟ್ಟವನ್ನು ಕಾಲ್ನಡಿಗೆಯಲ್ಲಿಯೂ ಸಹ ಪ್ರವೇಶಿಸುವುದು ಕಷ್ಟಕರವೆಂದು ಪರಿಗಣಿಸಲಾಗಿದೆ. ಕಠಿಣ ಮಳೆ ಮತ್ತು ಹಲವಾರು ಅಡೆತಡೆಗಳ ನಡುವೆ ಪೂರ್ಣಗೊಂಡ ಈ ದಂಡಯಾತ್ರೆಯನ್ನು ಸಹಿಷ್ಣುತೆ ಮತ್ತು ದೃಢಸಂಕಲ್ಪದ ದಾಖಲೆ ಎಂದು ಪ್ರಶಂಸಿಸಲಾಗಿದೆ.

ತಮ್ಮ ಪ್ರಯಾಣದ ಮೂಲಕ, ಸಾಯಿ ಕುಮಾರ್ ಅವರು ರಾಯಲಸೀಮಾ ಪ್ರದೇಶದಾದ್ಯಂತದ ದೂರದ ಬೆಟ್ಟಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಎತ್ತಿ ತೋರಿಸುತ್ತಿದ್ದಾರೆ. ಸಾಂಪ್ರದಾಯಿಕ ಸೈಕ್ಲಿಸ್ಟ್‌ಗಳಿಗಿಂತ



ಭಿನ್ನವಾಗಿ, ಅವರು ಹೆಚ್ಚಾಗಿ ಕಡಿದಾದ ಮತ್ತು ಪ್ರವೇಶಿಸಲಾಗದ ಮಾರ್ಗಗಳಲ್ಲಿ ತಮ್ಮ ಸೈಕಲ್‌ನೊಂದಿಗೆ ಪಾದಯಾತ್ರೆ ಮಾಡುತ್ತಾರೆ.

ಹಿಂದೂಪುರದ ಚಿನ್ನ ಮಾರುಕಟ್ಟೆ ಪ್ರದೇಶದ ನಿವಾಸಿಯಾದ ಸಾಯಿ ಕುಮಾರ್ ಸ್ಥಳೀಯ ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಪ್ರಸ್ತುತ ಕಿಯಾ ಮೋಟಾರ್ಸ್ ಇಂಡಿಯಾದ ಪೂರಕ ಘಟಕದಲ್ಲಿ ಉದ್ಯೋಗಿಯಾಗಿದ್ದಾರೆ. ಕಳೆದ ಆರು ವರ್ಷಗಳಿಂದ, ಅವರು ಸೈಕ್ಲಿಂಗ್ ಮತ್ತು ಪ್ರಯಾಣವನ್ನು ಕೇವಲ ಹವ್ಯಾಸವಾಗಿ ಮಾತ್ರವಲ್ಲದೆ ಗ್ರಾಮೀಣ ಜೀವನ, ಪರಂಪರೆ ಮತ್ತು ಸಾಮಾಜಿಕ ವಿಕಾಸವನ್ನು ಅಧ್ಯಯನ ಮಾಡುವ ಸಾಧನವಾಗಿಯೂ ಅನುಸರಿಸುತ್ತಿದ್ದಾರೆ.ಅವರ ಈ ಉತ್ಸಾಹ ಅವರನ್ನು ಭಾರತದ ಗಡಿಯಾಚೆಗೆ ಕರೆದೊಯ್ದು ನೇಪಾಳ, ಥೈಲ್ಯಾಂಡ್, ಪಾಕಿಸ್ತಾನ ಮತ್ತು ಮಲೇಷ್ಯಾಗಳಿಗೆ ಭೇಟಿ ನೀಡಿದೆ. ತಮ್ಮ ಪ್ರಯಾಣವನ್ನು ನೆನಪಿಸಿ ಕೊಳ್ಳುತ್ತಾ, ಸಾಯಿ ಕುಮಾರ್ ಅವರು ಗ್ರಾಮೀಣ ಥೈಲ್ಯಾಂಡ್‌ನಾದ್ಯಂತ 100 ಕಿ.ಮೀ.ಗೂ ಹೆಚ್ಚು ದೂರ ಕಾಲ್ನಡಿಗೆಯಲ್ಲಿ ಕ್ರಮಿಸಿ, ಮುಖ್ಯವಾಗಿ ರೈತರೊಂದಿಗೆ ಸಂವಹನ ನಡೆಸಿ ಅವರ ಕೃಷಿ ಪದ್ಧತಿಗಳು ಮತ್ತು ಜೀವನಶೈಲಿಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿದರು.

ಅವರು ಅನೇಕ ಪ್ರದೇಶಗಳಲ್ಲಿ 4000 ಕಿ.ಮೀ ಸೈಕಲ್ ಪ್ರಯಾಣವನ್ನು ಕೈಗೊಂಡಿದ್ದಾರೆ, ಆಗಾಗ್ಗೆ ದೀರ್ಘ–ದೂರ ಸೈಕ್ಲಿಂಗ್ ಮತ್ತು ಚಾರಣವನ್ನು ಸಂಯೋಜಿಸಿದ್ದಾರೆ. ಅನೇಕರು ವರ್ಷಗಳಲ್ಲಿ ಮಡಕಸಿರಾ ಬೆಟ್ಟವನ್ನು ಹತ್ತಿದ್ದಾರೆ,

ಸಾಧಾರಣ ಕುಟುಂಬದಿಂದ ಬಂದ ಅವರ ತಂದೆ ಆಟೋ ಚಾಲಕ ಮತ್ತು ತಾಯಿ ದರ್ಜಿ – ಸಾಯಿ ಕುಮಾರ್ ತಮ್ಮ ವೃತ್ತಿಪರ ಜವಾಬ್ದಾರಿಗಳನ್ನು ಪರಿಶೋಧನೆಯ ಮೇಲಿನ ಉತ್ಸಾಹದೊಂದಿಗೆ ಸಮತೋಲನಗೊಳಿಸುತ್ತಾರೆ. ದೇಶಾದ್ಯಂತ ವ್ಯಾಪಕವಾಗಿ ಪ್ರಯಾಣಿಸುವುದು, ನಗರ ಮತ್ತು ಗ್ರಾಮೀಣ ಜೀವನವನ್ನು ನಿಕಟವಾಗಿ ಗಮನಿಸುವುದು ಮತ್ತು ಸಾಂಪ್ರದಾಯಿಕ ಸಂಸ್ಕೃತಿಗಳನ್ನು ಸಾರ್ವಜನಿಕ ಗಮನಕ್ಕೆ ತರುವುದು ಅವರ ಮಹತ್ವಾಕಾಂಕ್ಷೆಯಾಗಿದೆ.

ಸಾಹಸ ಪ್ರಯಾಣದ ಹೊರತಾಗಿ, ಸಾಯಿ ಕುಮಾರ್ ತಮ್ಮ ಸೃಜನಶೀಲತೆಗೆ ಹೆಸರುವಾಸಿಯಾಗಿದ್ದಾರೆ. 2020 ರಲ್ಲಿ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ, ಅವರು 225 ಚುಕ್ಕೆಗಳನ್ನು ಬಳಸಿ 40 ಅಡಿ ಪೆನ್ಸಿಲ್ ಸ್ಕೆಚ್ ಅನ್ನು ರಚಿಸಿದರು, ಇದು ವಿಶ್ವ ದಾಖಲೆಯಾಗಿ ಮನ್ನಣೆ ಗಳಿಸಿತು. ನಂತರ ಈ ಕಲಾಕೃತಿಯನ್ನು ಒಂದು ಸಮಾರಂಭದ ಸಭಾಂಗಣದಲ್ಲಿ ಪ್ರದರ್ಶಿಸಲಾಯಿತು ಮತ್ತು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಿಸಲಾಯಿತು.

ಸಾಯಿ ಕುಮಾರ್ ಅವರ ಉತ್ಸಾಹವು ಅವರನ್ನು ಭಾರತೀಯ ಗಡಿಗಳನ್ನು ಮೀರಿ ನೇಪಾಳ, ಥೈಲ್ಯಾಂಡ್, ಪಾಕಿಸ್ತಾನ ಮತ್ತು ಮಲೇಷ್ಯಾಗಳಿಗೆ ಭೇಟಿ ನೀಡಿದೆ. ಗ್ರಾಮೀಣ ಥೈಲ್ಯಾಂಡ್‌ನಾದ್ಯಂತ 100 ಕಿ.ಮೀ.ಗಳಿಗಿಂತ ಹೆಚ್ಚು ದೂರ ಕಾಲ್ನಡಿಗೆಯಲ್ಲಿ ಕ್ರಮಿಸಿದ್ದೇನೆ ಎಂದು ಅವರು ಹೇಳಿದರು.



ರೈತ ಸಂಘದಿಂದ ಸರ್ಕಾರದ ವಿರುದ್ಧ ಶವಯಾತ್ರೆ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ರೈತರ ಆಕ್ರೋಶ। ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಲು ಆಗ್ರಹ



ರಾಮನಗರ: ಬರ ಘೋಷಣೆ, ಸಾಲಮನ್ನಾ, ಕೃಷಿಗೆ ಸಮರ್ಪಕ ಬೆಲೆ, ಬೆಳೆನಷ್ಟಕ್ಕೆ ವೈಜ್ಞಾನಿಕ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಣಕು ಶವಯಾತ್ರೆ ಮಾಡುವ ಮೂಲಕ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ವಿನೂತವಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಎಪಿಎಂಸಿ ಮಾರುಕಟ್ಟೆ ಆವರಣದಿಂದ ಪ್ರಾರಂಭವಾದ ಅಣಕು ಶವಯಾತ್ರೆ ಪ್ರತಿಭಟನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ನೂರಾರು ರೈತರು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಶವಯಾತ್ರೆ ಪ್ರತಿಭಟನಾ ಮೆರವಣಿಗೆ ತಾಲ್ಲೂಕು ಆಡಳಿತ ಕಚೇರಿಗೆ ತಲುಪಿತು.

ತಾಲ್ಲೂಕು ಆಡಳಿತ ಕಚೇರಿ ಮುಂಭಾಗ ಜಮಾಯಿಸಿದ ರೈತ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ನಾಡಿನ ಅನ್ನದಾತರ ಸಮಸ್ಯೆ ಬಗ್ಗೆ ಸರ್ಕಾರ ಬೇಜಾವಾಬ್ದಾರಿ ಹಾಗೂ ದಿವ್ಯನಿರ್ಲಕ್ಷ್ಯ ತೋರುತ್ತಿದೆ ಎಂದು ಕಿಡಿಕಾರಿದರು. ಉಪ ವಿಭಾಗಾಧಿಕಾರಿ ಬಿನೋಯ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ ಪ್ರತಿಭಟನಾನಿರತ ರೈತರು ಕೂಡಲೇ ತಮ್ಮ ನೆರವಿಗೆ ಸರ್ಕಾರಗಳು ಧಾವಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲಯ್ಯ ಮಾತನಾಡಿ, ರಾಜ್ಯದಲ್ಲಿ ಕಳೆದ 140 ವರ್ಷದ ನಂತರ ಘೋರ ಬರಗಾಲ ಉಂಟಾಗಿದೆ. ಈ ಹಿಂದೆ ಕಾಣದ ಭೀಕರ ಬರಗಾಲ ಎದುರಾಗಿದೆ. ಮಳೆಯಾಗದೆ ಕೆರೆ ಕಟ್ಟೆಗಳಲ್ಲಿ ನೀರಿಲ್ಲ. ಅಂತರ್ಜಲ ಕ್ಷೀಣಿಸುತ್ತಿದ್ದು, ಅಲ್ಲಲ್ಲಿ ಬೆಳೆದ ಫಸಲು ಒಣಗಿದೆ. ತೋಟಗಾರಿಕೆ ಬೆಳೆ ಹಂತ ಹಂತವಾಗಿ ರೈತನ ಕೈ ಕಚ್ಚುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ರೈತರು ಜೀವನೋಪಾಯಕ್ಕಾಗಿ ಉದ್ಯೋಗ ಅರಸಿ ದೂರದ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ದನ–ಕರುಗಳಿಗೆ ಹುಲ್ಲು ನೀರು ಇಲ್ಲದೆ, ಪರದಾಡುವಂತಾಗಿದೆ ಇಷ್ಟೆಲ್ಲಾ ಸಂಕಷ್ಟಗಳು ಎದುರಾಗಿದ್ದರೂ ರಾಜ್ಯ ಸರ್ಕಾರ 101 ತಾಲ್ಲೂಕುಗಳನ್ನು ಬರ ಎಂದು ಘೋಷಿಸಿದೆ. ಜಿಲ್ಲಾ ವ್ಯಾಪ್ತಿಯ ಕನಕಪುರ ಚನ್ನಪಟ್ಟಣ ಹಾರೋಹಳ್ಳಿ ತಾಲ್ಲೂಕುಗಳನ್ನು ಬರ ಈ ಪಟ್ಟಿಗೆ ಸೇರಿಸದೆ ಕಾಲಹರಣ ಮಾಡುತ್ತಿದೆ. ಅಲ್ಲದೇ ಸರ್ಕಾರ ಗ್ಯಾರಂಟಿ ಯೋಜನೆಯಲ್ಲಿ ನೀಡುವ 2 ಸಾವಿರ ಮಾದರಿಯಲ್ಲಿ ಪ್ರತಿ ರೈತರಿಗೆ 2,500 ಪರಿಹಾರ ನೀಡುವುದಾಗಿ ಘೋಷಿಸಿರುವುದು ಹಾಸ್ಯಾಸ್ಪದವಾಗಿದೆ ಎಂದು ಕಿಡಿಕಾರಿದರು.

ರೈತ ಮುಖಂಡ ಕುಮಾರಸ್ವಾಮಿ ಮಾತನಾಡಿ, ರೈತರ ಕೃಷಿ ಸಾಲ ಮನ್ನಾ ಆಗಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಶೇ. 50ರ ಅನುಪಾತದಲ್ಲಿ ಸಾಲ ಮನ್ನಾ ಮಾಡಬೇಕು. ಸರ್ಕಾರ ಸಾಲ ಮನ್ನಾ ಘೋಷಿಸುವ ವರೆವಿಗೂ ಬ್ಯಾಂಕುಗಳು ಸಾಲ ವಸೂಲಿ ಮಾಡುವುದನ್ನು ತಡೆಹಿಡಿಯಬೇಕು. ಕೃಷಿಗೆ ಪ್ರಥಮ ಆದ್ಯತೆ ನೀಡಿ ಸರ್ಕಾರ ಒಪ್ಪಿಕೊಂಡಿರುವಂತೆ ಕನಿಷ್ಠ 7 ಗಂಟೆಗಳ ಕಾಲ ವಿದ್ಯುತ್ ಅನ್ನು ಕೃಷಿ ಪಂಪ್‌ಸೆಟ್‌ಗಳಿಗೆ ಸರಬರಾಜು ಮಾಡಬೇಕು.! ರೈತರ ಕೃಷಿ ಚಟುವಟಿಕೆಗೆ ಟಿಸಿ ಕೆಟ್ಟುಹೋದ ಸಂದರ್ಭದಲ್ಲಿ 72 ಗಂಟೆಯೊಳಗೆ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಬಿಡದಿ ಹೋಬಳಿಯ ಭೈರಮಂಗಲ ಕಂಚುಗಾರನಹಳ್ಳಿ ಪಂಚಾಯಿತಿ ವ್ಯಾಪ್ತಿಯ ರೈತರ ಫಲವತ್ತಾದ ಭೂಮಿಯನ್ನು ಸ್ವಾದೀನ ಪಡಿಸಿಕೊಳ್ಳ ಲು ಹೊರಟಿರುವ ಸರ್ಕಾರ ಭೂ ಸ್ವಾಧೀನ ಕೈಬೇಡಬೇಕು ರೈತರ ಮೇಲೆ ದೌರ್ಜನ್ಯ ಮಾಡಿರುವ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕನಕಪುರ ತಾಲೂಕಿನ ಹಾರೋಬೆಲೆ ಡ್ಯಾಮ್ ನಿಂದ ರೈತರ ಜಮೀನಿಗೆ ನೀರು ಕೊಡದೆ ಖಾಸಗಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನೀರು ರೈತರಿಗೆ ಅನ್ಯಾಯ ಮಾಡಿರುವ ಕಾವೇರಿ ನೀರಾವರಿ ನಿಗಮದ ಎಇ ಮತ್ತು ಎಇಇಗಳನ್ನು ಅಮಾನತ್ತು ಮಾಡಿ ತನಿಕೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾಧಿಕಾರಿ ಯಶವಂತ ಗುರುಕರ್ ಎರಡು ವರ್ಷದಿಂದ ರೈತರ ಕುಂದು ಕೊರತೆ ಸಭೆಯನ್ನು ಕರೆದಿಲ್ಲ, ಹೋರಾಟ ಮಾಡುವ ಸಂಘಟನೆಗಳಿಗೆ 144 ನಿಷೇಧಾಜ್ಞೆ ಜಾರಿ ಮಾಡಿರುವ ರೈತ ವಿರೋಧಿ ಜಿಲ್ಲಾಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

ಚನ್ನಪಟ್ಟಣ ತಾಲೂಕು ತಹಸೀಲ್ದಾರ್ ರೈತರ ಕುಂದು ಕೊರತೆ ಸಭೆಯಲ್ಲಿ ದಾಖಲದ ದೂರುಗಳು ಇದುವರೆವಿಗೂ ವಿಲೇವಾರಿ ಮಾಡಿಲ್ಲ ! ಸಾರ್ವಜನಿಕರ ಕೈಗೂ ಸಿಗುತ್ತಿಲ್ಲ ಕರ್ತವ್ಯದ ದಿನಗಳಲ್ಲಿ ಕಚೇರಿಗೆ ಗೈರು ರಜಾದಿನಗಳಲ್ಲಿ ಕಚೇರಿಗೆ ಹಾಜರಾಗುತ್ತಿದ್ದಾರೆ. ಕೂಡಲೇ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರಾದ ತಿಮ್ಮೇಗೌಡ, ಎಸ್.ಸಿ.ಕೃಷ್ಣಯ್ಯ, ವಿಜಯ್ ಕುಮಾರ್, ಶಿವರಾಜು ನಾಗರಾಜು, ಪ್ರಕಾಶ್ ಸೇರಿದಂತೆ ಹಲವರು ಇದ್ದರು.ರೈತರ ಮೇಲೆ ದೌರ್ಜನ್ಯ, ಮಾನವ ಹಕ್ಕುಗಳ ಉಲ್ಲಂಘನೆಬಿಡದಿ ಹೋರಾಟದಲ್ಲಿ ಭಾಗಿಯಾದ್ದ ರೈತರು ಹಾಗೂ ರೈತ ಮಹಿಳೆಯರು ಮೇಲೆ ಪೊಲೀಸರು ದೌರ್ಜನ್ಯ ಹಾಗೂ ಬಲವಂತವಾಗಿ ಬಂಧಿಸಿದ್ದಾರೆ. ಪ್ರಾಣಿಗಳ ಹಾಗೆ ಎಳೆದಾಡಿರುವ ಪೊಲೀಸರ ಈ ಕ್ರಮವೂ ಮಾನವ ಹಕ್ಕುಗಳ ಉಲ್ಲಂಘನೆಯಾಗಲಿದೆ.ಈ ಘಟನೆಯಲ್ಲಿ ಭಾಗಿಯಾಗಿರುವ ಪೊಲೀಸರ ವಿರುದ್ಧ ಕ್ರಮತೆಗೆದುಕೊಳ್ಳಬೇಕು.

ಕುರಿಗಳ ರೀತಿಯಲ್ಲಿ ರೈತರನ್ನು ಎಳೆಯಲು ಕಾನೂನಿನಲ್ಲಿ ಅವಕಾಶವಿದಯೇ? ಈ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಲಾಗುತ್ತದೆ ಎಂದು ರೈತ ಮುಖಂಡ ಕುಮಾರಸ್ವಾಮಿ ತಿಳಿಸಿದರು.

ಬಹಿಸ್ಕಾರ ಹಿಂಪಡೆದು ಕಾರ್ಯಕ್ರಮಕ್ಕೆ ಬಾಗಿ



ಕೊಳ್ಳೇಗಾಲ ಶಾಸಕ ಎ. ಆರ್. ಕೃಷ್ಣಮೂರ್ತಿಯವರ ನಿರ್ಲಕ್ಷ್ಯದಿಂದ ಅಸಮಾಧಾನಗೊಂಡು ಸೆ. 30 ರಂದು ನಡೆಯಲಿರುವ ಮುಖ್ಯಮಂತ್ರಿಗಳ ಕಾರ್ಯಕ್ರಮವನ್ನು ಬಹಿಸ್ಕರಿಸಿದ್ದ ಪಟ್ಟಣದ ಅಂಜುಮಾನ್ ಎ. ಇಸ್ಲಾಮಿಯ ಒಕ್ಕೂಟದಿಂದ ಬಹಿಸ್ಕಾರ ಹಿಂಪಡೆದು ಇಂದು ಅಂಜುಮಾನ್ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಕರೆಯಲಾಗಿತ್ತು.ಅಂಜುಮಾನ್ ಕಂಪ್ಲೇಂಕ್ಸ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷರಾದ ಹಭಿಬ್ ಪಾಶ ಮಾತನಾಡಿ ಶಾಸಕರಾದ ಎ. ಆರ್. ಕೃಷ್ಣಮೂರ್ತಿ ಯವರು ಮುಸ್ಲಿಂ ಸಮುದಾಯದ ಸಾದಿ ಮಹಲ್ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಲು ಅನುದಾನವನ್ನು ಹಾಕಿ ಕೊಡುತ್ತೇನೆ ಹಾಗೂ ಸಮುದಾಯಕ್ಕೆ ಸ್ಮಶಾನಕ್ಕೆ ಜಾಗ ಕೊಡಿಸುತ್ತೇವೆ ಎಂದು ಹೇಳಿದ್ದರು ಅದರೆ ಸಾದಿ ಮಹಲ್ ಕಾಮಗಾರಿ ಇನ್ನು ಮುಗಿದಿಲ್ಲ ಪಕ್ಕದಲ್ಲಿ ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನೆಗೆ ಸಿದ್ದವಾಗಿದೆ, ಅದರ ಜೊತೆಯಲ್ಲಿಯೇ ಸಾದಿ ಮಹಲ್ ಉದ್ಘಾಟನೆ ಆಗಬೇಕಾಗಿತ್ತು ಆದರೆ ಕಾಮಗಾರಿ ಇನ್ನು ಮುಗಿದಿಲ್ಲ ಶಾಸಕರು 50 ಲಕ್ಷ ಹಾಕಿ ಕೊಟ್ಟಿದ್ದಾರೆ ಕಾಮಗಾರಿ ಮುಗಿಯಲು ಅಷ್ಟು ಅಮೌಂಟ್ ಸಾಲೋದಿಲ್ಲ ಹಾಗೂ ನಮ್ಮ ಸಮುದಾಯಕ್ಕೆ ಸ್ಮಶಾನದ ಕೊರತೆ ಇದೆ ಇದೆಲ್ಲ ಶಾಸಕರ ಬಳಿ ಬೇಡಿಕೆ ಇಟ್ಟಿದ್ದೇವೆ ಶಾಸಕರು ಅವರೆ ಸ್ವತಃ ನಮ್ಮ ಮುಖಂಡರ ಜೊತೆ ಮಾತನಾಡಿ ಆದಷ್ಟು ಬೇಗ ಸಾದಿ ಮಹಲ್ ಕಾಮಾಗಾರಿಯನ್ನು ಮುಗಿಸಿಕೊಡುತ್ತೇನೆ ಮತ್ತು ಸ್ಮಶಾನಕ್ಕೆ ಜಾಗದ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ ಆದ್ದರಿಂದ ನಮ್ಮ ಸಮುದಾಯದಿಂದ ಬಹಿಸ್ಕಾರವನ್ನು ಹಿಂಪಡೆದು ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ ಎಂದು ತಿಳಿಸಿದರು,

ಕೊಳ್ಳೆಗಾಲಕ್ಕೆ ಸೆ. 30 ಡಿಕೆ ಶಿವಕುಮಾರ್ ಸುಮಾರು 20 ಕ್ಕೂ ಹೆಚ್ಚು ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಕೇಂದ್ರ ಸ್ಥಾನ ಎಂ. ಜಿ ಎಸ್. ವಿ ಕಾಲೇಜು ಮೈದಾನದಲ್ಲಿ ರಾಜ್ಯದ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಇತರ ಸಚಿವರ ಸಮ್ಮುಖದಲ್ಲಿ ಸೆ. 30 ರಂದು ನಡೆಯುವ ಕ್ಷೇತ್ರ ವ್ಯಾಪ್ತಿಯಲ್ಲಿ 20 ಹೆಚ್ಚು ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮ ಹಿನ್ನೆಲೆ ಜಿಲ್ಲಾ ಉಸ್ತುವಾರಿ ಸಚಿವರು ಕೊಳ್ಳೇಗಾಲ ಶಾಸಕ ಎ. ಆರ್. ಕೃಷ್ಣಮೂರ್ತಿ ಮಾಜಿ ಶಾಸಕರುಗಳ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರುಗಳ ಪೂರ್ವಭಾವಿ ಸಭೆಯನ್ನು ಪಟ್ಟಣದ ಭ್ರಮರಾಂಭ ಕಲ್ಯಾಣ ಮಂಟಪದಲ್ಲಿ ನಡೆಸಲಾಯಿತು,ಜಿಲ್ಲಾ ಉಸ್ತುವಾರಿ ಸಚಿವರಾದ ಪುಟ್ಟರಂಗಶೆಟ್ಟಿರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.ಈ ಕಾರ್ಯಕ್ರಮದಲ್ಲಿ ಶಾಸಕರು. ಮಾತನಾಡಿ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು ಮಾಡಬೇಕಾಗಿತ್ತು ಆದರೆ ಅವರು ಪದತ್ಯಾಗ ಮಾಡಿದ ಮೇಲೆ ಹಾಲಿ ಮುಖ್ಯಮಂತ್ರಿಗಳಾಗಿರುವ ಡಿ. ಕೆ. ಶಿವಕುಮಾರ್ ರವರು ಸಚಿವರುಗಳ ನೇತೃತ್ವದಲ್ಲಿ ಆ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ,

ಸಿದ್ದರಾಮಯ್ಯನವರ ಕ್ಯಾಬಿನೆಟ್ ನಲ್ಲಿ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿತ್ತು ಜಿಲ್ಲಾಸ್ಪತ್ರೆ, ಸೇತುವೆ, ತೆಂಗಿನ ಕಾಯಿ ಮಾರುಕಟ್ಟೆ, ಬಿಲ್ವಿದ್ಯಾ ತರಭೇತಿ ಶಾಲೆ, ಒಲಂಗಣ ಕ್ರೀಡಾಂಗಣ, ಸಾದಿ ಮಹಲ್ ಕುರುಬನ ಕಟ್ಟೆ ಅಭಿವೃದ್ಧಿ ಕಾಮಗಾರಿ,

ಅನೇಕ ಕಾಮಗಾರಿಗಳು, ಸುಮಾರು 20 ಕ್ಕೂ ಹೆಚ್ಚು ಕಾಮಗಾರಿಗಳಿಗೆ ಸೆ. 30 ಡಿಕೆ ಶಿವಕುಮಾರ್ ರವರ ಸರ್ಕಾರದಲ್ಲಿ ಹೊಂಗನೂರು ಹಿರಿಕೆರೆ ಅಭಿವೃದ್ಧಿ 18 ಕೋಟಿ, ಗುಂಡಾಲ್ ಜಲಾಶಯ ಅಭಿವೃದ್ಧಿ 50 ಕೋಟಿ ಅನುದಾನ ಮಂಜೂರಾಗಿರುತ್ತದೆ, ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನೆಯ ಬಗ್ಗೆ ಭೀಮನಗರದ ಮುಖಂಡರ ಜೊತೆ ಮಾತನಾಡಿ ಕಾರ್ಯಕ್ರಮವನ್ನು ಅಯೋಜನೆ ನಮಗೆ 19 ವರ್ಷ ವನವಾಸ ಕೊಳ್ಳೇಗಾಲ ಅಂಬೇಡ್ಕರ್ ಸಮುದಾಯ ಭವನ 20 ವರ್ಷ ವನವಾಸವಾಗಿ ಈಗ ನನ್ನ ಅವಧಿಯಲ್ಲಿ ಉದ್ಘಾಟನೆಗೆ ಸಿದ್ದವಾಗಿದೆ ಸುಮಾರು 7 ಕೋಟಿ 50 ಲಕ್ಷ ರೂಪಾಯಿ ಅನುದಾನ ತಗುಲಿದೆ, ಆದ್ದರಿಂದ ಸಮುದಾಯದ ಮುಖಂಡರು ಯಜಮಾನರುಗಳ ಜೊತೆ ಮಾತನಾಡಿ ಉದ್ಘಾಟನೆಗೆ ಸಿದ್ಧತೆ ಮಾಡಲಾಗುವುದು ಮಾಡಲಾಗುವುದು, ಹಾಗೆ ಕ್ಷೇತ್ರದಲ್ಲಿ ಎಲ್ಲ ಸಮುದಾಯದ ಎಲ್ಲ ವರ್ಗದ ಸಮುದಾಯ ಭವನಗಳಿಗೆ ಅನುದಾನವನ್ನು ಕೊಡಲಾಗಿದೆ, ಬಸವ ಭವನ, ಕನಕ ಭವನ, ವಾಲ್ಮೀಕಿ ಭವನ, ಭಗೀರಥ ಭವನ, ಒಕ್ಕಲಿಗ ಭವನ, ಸಾದಿ ಮಹಲ್, ಹಾಗೂ ಎಲ್ಲ ಭವನಗಳ ನಿರ್ಮಾಣ ಮತ್ತು ಮುಂದುವರಿದ ಕಾಮಗಾರಿಗಳಿಗೆ ಅನುದಾನವನ್ನು ಕೊಡಲಾಗಿದೆ, ಜೊತೆಗೆ ಲಿಂಗಾಯತರ ಬೀದಿ, ಪರಿಶಿಷ್ಟರ ಬೀದಿ, ನಾಯಕರ ಬೀದಿ, ಉಪ್ಪಾರ ಬೀದಿ, ಮಡಿವಾಳರ ಬೀದಿ ಅಲ್ಪ ಸಂಖ್ಯಾತರ ಬೀದಿಗಳಲ್ಲಿ ರಸ್ತೆ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಅನುದಾನವನ್ನು ಕೊಡಲಾಗಿದೆ, ಎಲ್ಲ ಕಾಮಗಾರಿಗಳಿಗೆ ಸಿದ್ದರಾಮಯ್ಯನವರು ಅನುದಾನವನ್ನು ಕೊಟ್ಟು ತಮ್ಮ ಸ್ಥಾನದಿಂದ ನಿರ್ಗಮಿಸಿದ ಮೇಲೆ ಡಿ. ಕೆ. ಶಿವಕುಮಾರ್ ರವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಮೇಲೆ ಮೊದಲ ಬಾರಿಗೆ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮವನ್ನು ನಡೆಸಿಕೊಡಲು ಸೆ 30 ರಂದು ಕೊಳ್ಳೇಗಾಲ ಕ್ಷೇತ್ರಕ್ಕೆ ಆಗಮಿಸುತ್ತಿದ್ದಾರೆ ಆದ್ದರಿಂದ ಪಕ್ಷ. ಮುಖಂಡರು ಕಾರ್ಯಕರ್ತರು, ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು,

ಪಕ್ಷದ ಪದಾಧಿಕಾರಿಗಳು ತುಂಬಾ ಊರೂಪ್ ಇಟ್ಟುಕೊಂಡು ಗೆದ್ದು ಬಂದಿದ್ದೀರಾ ಆದ್ದರಿಂದ ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಸ್ಥಳೀಯ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ಪಕ್ಷವನ್ನು ಬಲ ಪಡಿಸಬೇಕು, ಎಂದರು

ನಂತರ ಹನೂರು ಮಾಜಿ ಶಾಸಕ ಆರ್. ನರೇಂದ್ರ ಮಾತನಾಡಿ ಸೆ. 30 ರಂದು ಮುಖ್ಯಮಂತ್ರಿಗಳಾದ ಡಿ. ಕೆ. ಶಿವಕುಮಾರ್ ನೇತೃತ್ವದಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮ ಒಂದು ಐತಿಹಾಸಿಕ ಕಾರ್ಯಕ್ರಮವಾಗಿದೆ ಏಕೆಂದರೆ ಕಾಂಗ್ರೆಸ್ ಸರ್ಕಾರದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳು ನಡೆದಿವೆ, ಹಾಗೆಯೇ ಹನೂರು ಕ್ಷೇತ್ರದಲ್ಲಿ ನಾನು ಕೂಡ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಸಿದ್ದೇನೆ ಪಾಳ್ಯ ಆಸ್ಪತ್ರೆ, ದೊಡ್ಡಿಂದುವಾಡಿ ಆಸ್ಪತ್ರೆ, ರಾಮಪುರ ಆಸ್ಪತ್ರೆ, ಹಾಗೂ ಕ್ಷೇತ್ರ ವ್ಯಾಪ್ತಿಯಲ್ಲಿ ಗಿರಿ ಜನರಿಗಾಗಿ ವಸತಿ ಶಾಲಾ ಕಾಲೇಜುಗಳನ್ನು ನಿರ್ಮಾಣ ಮಾಡಿಸಿದ್ದೇನೆ,

ಕೆರೆಗಳ ನೀರು ತುಂಬಿಸುವ ಕೆಲಸಗಳನ್ನು ಮಾಡಿಸಿದ್ದೇನೆ ಇದೆಲ್ಲ ನಮ್ಮ ಸರ್ಕಾರ ಅವಧಿಯಲ್ಲಿ ಈಗ ಕೊಳ್ಳೇಗಾಲದಲ್ಲಿ ಸುಮಾರು 411 ಕೋಟಿ ಅನುದಾನದ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಾರೆ ಆದ್ದರಿಂದ ಪಕ್ಷದ ಎಲ್ಲ ಮುಖಂಡರು ಕಾರ್ಯಕರ್ತರುಗಳು ಹೆಚ್ಚು ಜನರನ್ನು ಸೇರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು, ನಮ್ಮ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದ ಸರ್ಕಾರ, ಚುನಾವಣೆ ಸಂದರ್ಭದಲ್ಲಿ ಮಾತು ಕೊಟ್ಟ ಹಾಗೆ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತಂದು ಜನರಿಗೆ ಕೊಟ್ಟಿದ್ದಾರೆ, ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಅನುದಾನವನ್ನು ಕೊಡುತ್ತಿದ್ದಾರೆ, ವಿರೋಧ ಪಕ್ಷದವರು ಸುಖಸುಮ್ಮನೆ ಕಾಂಗ್ರೆಸ್ ಸರ್ಕಾರದ ಮೇಲೆ ಅಪಪ್ರಚಾರ ಮಾಡಿ ಗ್ಯಾರಂಟಿ ಯೋಜನೆಗಳಿಂದ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣ ಇಲ್ಲ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ, ಆದರೆ ರಾಜ್ಯದಲ್ಲಿ ಕೋಟ್ಯಂತರ ರೂಪಾಯಿಗಳ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ, ಆದ್ದರಿಂದ ಪಕ್ಷದ ಮುಖಂಡರು ಮುಂದಿನ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಪಕ್ಷವನ್ನು ಬಲ ಪಡಿಸಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆ ಎಲ್ಲ ಕ್ಷೇತ್ರಗಳಲ್ಲಿಯೂ ಕೂಡ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡುವ ನಿಟ್ಟಿನಲ್ಲಿ ದುಡಿಯಬೇಕು ಎಂದರು.

ನಂತರ ಜಿಲ್ಲಾ ಉಸ್ತುವಾರಿ ಸಚಿವರಾದ ಪುಟ್ಟರಂಗಶೆಟ್ಟಿಯವರು ಮಾತನಾಡಿ ಸೆ. 30 ರಂದು ಕೊಳ್ಳೇಗಾಲದಲ್ಲಿ ನಡೆಯಲಿರುವ ಮುಖ್ಯಮಂತ್ರಿಗಳ ನೇತೃತ್ವದ ಕಾರ್ಯಕ್ರಮ ಅದ್ದೂರಿಯಾಗಿ ಯಶಸ್ವಿಯಾಗಿ ನಡೆಯಬೇಕು, ಆದ್ದರಿಂದ ಪಕ್ಷದ ಮುಖಂಡರು ಕಾರ್ಯಕರ್ತರು ಶ್ರಮ ವಹಿಸಬೇಕು,, ಹೆಚ್ಚು ಜನರನ್ನು ಸೇರಿಸಿ ಮುಂದೆ ನಮ್ಮ ಜಿಲ್ಲೆಯಲ್ಲಿ ಆಗಬೇಕಾಗಿರುವ ಕೆಲಸಗಳ ಬಗ್ಗೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಮಾತನಾಡ ಬೇಕಿದೆ,

ಇಡೀ ದೇಶದಲ್ಲಿ ಬಡ ಜನರ ರೈತರ ಪರವಾಗಿ ಇರುವ ಸರ್ಕಾರ ಅಂತ ಇದ್ರೆ ಅದು ನಮ್ಮ ಕಾಂಗ್ರೆಸ್ ಸರ್ಕಾರ ಮಾತ್ರ, ಬಿಜೆಪಿಯವರು ಸುಳ್ಳು ಹೇಳುವುದೇ ಅವರ ಕಸುಬಾಗಿದೆ, ಸುಳ್ಳು ಹೇಳುವುದರಲ್ಲಿ ಪಿ. ಎಚ್ ಡಿ ಮಾಡಿದ್ದಾರೆ, ಕುಮಾರ್ ಸ್ವಾಮಿ ಹಾಗೂ ಸಾಲ ಮನ್ನಾ ಮಾಡಿ ಅಂತ ಕಾಂಗ್ರೆಸ್ ಸರ್ಕಾರಕ್ಕೆ ಹೇಳುತ್ತಾರೆ ಕುಮಾರ್ ಸ್ವಾಮಿಯವರು ಕೇಂದ್ರ ಮಂತ್ರಿಗಳಾಗಿದ್ದಾರೆ ಇವರು ಪ್ರಧಾನಿ ನರೇಂದ್ರ

ಸಂವಹನ, ಕರುಣೆ ವೈದ್ಯಕೀಯ ವೃತ್ತಿಯ ಜೀವಾಳ; ಪ್ರಥಮ ವರ್ಷದ ಎಂಬಿಬಿಎಸ್ ಕೋರ್ಸ್ ಉದ್ಘಾಟನೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಗರದ ಸಿದ್ಧಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ 2026–27ನೇ ಸಾಲಿನ ಪ್ರಥಮ ವರ್ಷದ ಎಂಬಿಬಿಎಸ್ ಕೋರ್ಸ್ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು

ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ. ಹೆಚ್. ಬಸವನಗೌಡಪ್ಪ ರವರು

ವೈದ್ಯಕೀಯ ಶಿಕ್ಷಣದಲ್ಲಿ ಕೇವಲ ಅಂಕ ಗಳಿಸುವುದು ಅಥವಾ ಪದವಿ ಪಡೆಯುವುದು ಮುಖ್ಯವಲ್ಲ; ಉತ್ತಮ ವೈದ್ಯರಾಗಲು ಸಮರ್ಪಣಾ ಭಾವ, ಸಂವಹನ ಕೌಶಲ್ಯ ಹಾಗೂ ಕರುಣೆ ಅತ್ಯಂತ ಅಗತ್ಯ ಎಂದು ಅಭಿಪ್ರಾಯಪಟ್ಟರು.

ವೈದ್ಯಕೀಯ ಕ್ಷೇತ್ರದಲ್ಲಿ ಶೇ. 99ರಷ್ಟು ಅಹಿತಕರ ಘಟನೆಗಳು ಸಂಭವಿಸುವುದು ವೈದ್ಯರ ಬೇಜವಾಬ್ದಾರಿಯಿಂದಲ್ಲ, ಬದಲಿಗೆ ರೋಗಿಗಳೊಂದಿಗೆ ಸರಿಯಾದ ಸಂವಹನ ಕೊರತೆಯಿಂದ ಎಂದು ಅವರು ಹೇಳಿದರು. ಹೀಗಾಗಿ ವಿದ್ಯಾರ್ಥಿಗಳು ರೋಗಿಗಳ ಮಾತನ್ನು ತಾಳ್ಮೆಯಿಂದ ಆಲಿಸುವ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕೃತಕ ಬುದ್ಧಿಮತ್ತೆ ಕಲಿಕೆಗೆ ನೆರವಾಗಬಲ್ಲದೇ ಹೊರತು, ರೋಗಿಯೊಂದಿಗಿನ ನೈತಿಕ ಸಂಬಂಧ ಹಾಗೂ ಕರುಣೆಯನ್ನು ತಂತ್ರಜ್ಞಾನ ನೀಡಲಾರದು ಎಂದ ಅವರು, ಡಾ. ದೇವಿ ಶೆಟ್ಟಿ ಹಾಗೂ ಡಾ. ಸಿ.ಎನ್. ಮಂಜುನಾಥ್ ಅವರಂತಹ ಸಾಧಕರ ಜೀವನ ಯುವ ವೈದ್ಯರಿಗೆ ಸ್ಫೂರ್ತಿಯಾಗಬೇಕು ಎಂದು ಕರೆ ನೀಡಿದರು. ಎಸ್‌ಎಂಸಿಆರ್‌ಐ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಸ್. ಸಚ್ಚಿದಾನಂದ ಮಾತನಾಡಿ, ಸಂಸ್ಥೆಯು 'ಸಾಮರ್ಥ್ಯ ಆಧಾರಿತ ವೈದ್ಯಕೀಯ ಶಿಕ್ಷಣ' ನೀಡುವ ಮೂಲಕ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದ ಕರುಣಾಮಯಿ ವೈದ್ಯರನ್ನಾಗಿ ರೂಪಿಸಲು ಬದ್ಧವಾಗಿದೆ ಎಂದರು. ಕರ್ನಾಟಕದಲ್ಲಿ ಸುಮಾರು 80 ಹಾಗೂ ಭಾರತದಲ್ಲಿ 830ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳಿದ್ದು, ಆರ್‌ಜಿಯುಹೆಚ್‌ಎಸ್ ಸಂಯೋಜನೆಯಡಿ ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಪಠ್ಯ ಜ್ಞಾನದ ಜೊತೆಗೆ ಸಮಗ್ರ ವ್ಯಕ್ತಿತ್ವ ವಿಕಸನಕ್ಕೂ ಆದ್ಯತೆ ನೀಡುತ್ತಿದೆ ಎಂದು ವಿವರಿಸಿದರು.

ಶ್ರೀ ಸಿದ್ಧಗಂಗಾ ಮಠದ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ವೈದ್ಯಕೀಯ ವೃತ್ತಿ ಕೇವಲ ಶೈಕ್ಷಣಿಕ ಕೋರ್ಸ್ ಅಲ್ಲ, ಅದೊಂದು ಸಮಾಜ ಸೇವೆಯ ಜವಾಬ್ದಾರಿ ಎಂದರು. ಪ್ರತಿಯೊಬ್ಬ ವೈದ್ಯರಿಗೂ ಸಾಮರ್ಥ್ಯ, ಕರುಣೆ ಹಾಗೂ ಉತ್ತಮ ಚಾರಿತ್ರ್ಯ ಅತಿ ಮುಖ್ಯ ಎಂದು ಹಾರೈಸಿದರು.

ಇನ್ನು ಈ ಸಮಾರಂಭದಲ್ಲಿ ಸಿದ್ದಗಂಗಾ ಮಠದ ಕಾರ್ಯನಿರ್ವಾಹಕ ನಿರ್ದೇಶಕರಾದ ಜಯವಿಭವ ಸ್ವಾಮಿ, ವೈದ್ಯಕೀಯ ಸೇವೆಗಳ ಕಾರ್ಯದರ್ಶಿಗಳಾದ ಟಿ.ಎಂ. ಸ್ವಾಮಿ, ಜಂಟಿ ಕಾರ್ಯದರ್ಶಿ ಡಾ. ಶಿವಕುಮಾರಯ್ಯ, ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, ಮೆಡಿಕಲ್ ಕಾಲೇಜಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಎಸ್.ಸಚ್ಚಿದಾನಂದ, ವೈದ್ಯಕೀಯ ನಿರ್ದೇಶಕರಾದ ಡಾ. ಎಸ್. ಪರಮೇಶ್ , ವೈದ್ಯಕೀಯ ಅಧೀಕ್ಷಕರಾದ ಡಾ. ನಿರಂಜನ ಮೂರ್ತಿ ಬಿ, ಪ್ರಾಂಶುಪಾಲರಾದ ಡಾ. ಶಾಲಿನಿ ಎಂ. ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

"ಎಂ.ಬಿ.ಬಿ.ಎಸ್. ಸೇರ್ಪಡೆಯಾಗುವುದು ಸಮಾಜದೊಂದಿಗೆ ಮಾಡಿಕೊಳ್ಳುವ ಜೀವನಪರ್ಯಂತ ಬದ್ಧತೆ. ವೈದ್ಯರು ಕೇವಲ ರೋಗ ನಿರ್ಣಯ ಮಾಡುವವರಲ್ಲ, ರೋಗಿಗಳ ನೋವನ್ನು ಉಪಶಮನ ಮಾಡುವ 'ನೋವು ನಿವಾರಕರು' ಎಂಬ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಮಾತು ಸದಾ ನೆನಪಿರಲಿ. ನೂತನ ವಿದ್ಯಾರ್ಥಿಗಳು ಪೋಷಕರ ತ್ಯಾಗ ಮತ್ತು ಗುರುಗಳ ಮಾರ್ಗದರ್ಶನವನ್ನು ಎಂದಿಗೂ ಮರೆಯಬಾರದು."

ಡಾ. ಹೆಚ್. ಬಸವನಗೌಡಪ್ಪ, ಕುಲಪತಿಗಳು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು

"ವೈದ್ಯಕೀಯ ಶಿಕ್ಷಣಕ್ಕೆ ಕೊನೆಯೆಂಬುದಿಲ್ಲ. ಪಠ್ಯಪುಸ್ತಕಗಳ ಜೊತೆಗೆ ಪ್ರತಿಯೊಬ್ಬ ರೋಗಿಯೂ ಒಬ್ಬ ದೊಡ್ಡ ಶಿಕ್ಷಕ. ಕೃತಕ ಬುದ್ಧಿಮತ್ತೆ ಎಷ್ಟೇ ಬೆಳೆದರೂ ವೈದ್ಯ ಮತ್ತು ರೋಗಿಯ ನಡುವಿನ ಮಾನವೀಯ ಸಂಪರ್ಕ ಹಾಗೂ ನಂಬಿಕೆಯನ್ನು ತಂತ್ರಜ್ಞಾನ ಭರ್ತಿ ಮಾಡಲಾರದು."

ಶ್ರೀ ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ

ಬರದ ಪರಿಹಾರ 2500 ರೂ.ಘೋಷಣೆ ರೈತರಿಗೆ ಅವಮಾನ

ಸೂರ್ಯಪ್ರಗತಿನ್ಯೂಸ್.ಕಾಂ



ತಿಪಟೂರು: ರಾಜ್ಯದಲ್ಲಿ ತೀವ್ರ ಬರದ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ರೈತರಿಗೆ ರಾಜ್ಯ ಸರ್ಕಾರವು 2500 ರೂ. ಕೇವಲ ಬರದ ಪರಿಹಾರ ಹಣವೆಂದು ದೇಶದ ಬೆನ್ನೆಲುಬು ಆಗಿರುವ ರೈತರಿಗೆ ಅವಮಾನ ಮಾಡಿರುವುದು ಸರಿಯಲ್ಲ ಎಂದು ಜೆ.ಡಿ.ಎಸ್. ಮುಖಂಡ ಕೆಟಿ ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದರು ನಗರದ ತಮ್ಮ ಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಇಡೀ ರಾಜ್ಯದಲ್ಲಿ ರೈತರು ತುಂಬಾ ಸಂಕಷ್ಟಕ್ಕೆ ಸಿಲುಕಿದ್ದಾರೆ ಮುಂಗಾರು ಬೆಳೆ ಸಂಪೂರ್ಣವಾಗಿ ಕೈಕೊಟ್ಟಿದೆ ಮಳೆಯು ಇಲ್ಲದೆ ಹಿಂಗಾರು ಮುಂಗಾರು ಬೆಳೆ ಇಲ್ಲದೆ ರೈತರು ಭೂಮಿಯನ್ನು ಉಳುಮೆ ಮಾಡಿ ಕೆಲವು ರೈತರು ಬಿತ್ತನೆ ಮಾಡಿದ್ದಾರೆ ಬಿತ್ತನೆ ಮಾಡಿರುವ ಬೆಳೆಯ ಮೊಳಕೆಯನ್ನು ಕಂಡಿಲ್ಲ. ಇನ್ನು ಕೆಲವು ರೈತರು ಬಿತ್ತನೆ ಮಾಡಲಾಗಿಲ್ಲ ಇಂತಹ ಸಮಯದಲ್ಲಿ ರಾಜ್ಯ ಸರ್ಕಾರವು 3. ಎಕರೆಗೆ ಕನಿಷ್ಠ 15 ಸಾವಿರ ರೂ. ಬರ ಪರಿಹಾರ ಘೋಷಿಸಬೇಕಿತ್ತು. ಆದರೆ ರಾಜ್ಯ ಸರ್ಕಾರ 2500 ರೂ.ಗಳನ್ನು ಘೋಷಿಸಿದೆ ರೈತರು ಬಿತ್ತನೆಗೆ ತರುವ ಒಂದು ಚೀಲ ಗೊಬ್ಬರದ ಬೆಲೆಯು 2000 ದಿಂದ 3000 ದವರೆಗೆ ಇದೆ. ಕಿಸನ್ ಸನ್ಮಾನ್ ಮೋದಿಯವರ ಆಡಳಿತದಲ್ಲಿ ಬರಗಾಲ ಇರಲಿ ಇಲ್ಲದೆ ಇರಲಿ ಪ್ರತಿ ಕುಟುಂಬದ ರೈತರಿಗೆ 6000 ಹಣವನ್ನು ನೀಡುತ್ತಿದೆ ರೈತರಿಗೆ 2500 ರೂ ನೀಡಿರುವುದು ಸರಿಯಲ್ಲ ಬರದ ಪರಿಹಾರವಾಗಿ ರೈತರಿಗೆ 15,000 ರೂ ಘೋಷಣೆ ಮಾಡಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರೈತರ ಜೋತೆ ಸೇರಿ ದೊಡ್ಡ ಮಟ್ಟದ ಹೋರಾಟ ಮಾಡಲಾಗುವುದು. ರೈತರು ಜೀವನ ಕಟ್ಟಿಕೊಳ್ಳಲು ಕಷ್ಟವಾಗುತ್ತಿದೆ ಮಳೆ ಇಲ್ಲದೆ ತಾಲೂಕಿನಲ್ಲಿ ಅಂತರ್ಜಲ ಕುಸಿತ ಕಂಡಿದೆ. ಹೇಮಾವತಿ ನಾಲೆಗೆ ನೀರು ಬಿಟ್ಟರು ತಾಲೂಕಿನ ಯಾವುದೇ ಕೆರೆಗಳಿಗೆ ನೀರು ತುಂಬಿಸಿಲ್ಲ. ಬೇರೆ ಯಾವುದೋ ಕಾರಣ ಇಟ್ಟುಕೊಂಡು ನೊಣವಿನ ಕೆರೆ ಕೆರೆಗೆ ನೀರು ಬಿಡಲಿಲ್ಲ ಪಕ್ಕದ ತಾಲೂಕಿನ ಶಾಸಕರುಗಳು ಅವರ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸಗಳನ್ನು ಮಾಡಿದ್ದಾರೆ. ತಿಪಟೂರು ತಾಲೂಕಿನ ನೊಣವಿನಕೆರೆ. ಕೆರೆ. ಹೊನ್ನವಳ್ಳಿಯ ಕೆರೆ . ತಿಪಟೂರು ಕೆರೆ. ಹೀಗೆ ಕೆರೆಗಳಿಗೆ ನೀರು ತುಂಬಿಸಿದ್ದರೆ ಬೋರ್ವೆಲ್ ಗಳು ಸ್ಟಾರ್ಟ್ ಆಗುತ್ತಿದ್ದವು ರೈತರಿಗೆ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರು ಸಿಗುತ್ತಿತ್ತು. ಮತ್ತೊಂದೆಡೆ ದನಕರುಗಳಿಗೆ ಮೇವು ಕೂಡ ಇಲ್ಲ ಸರ್ಕಾರವು ಬರ ಘೋಷಣೆ ಮಾಡಿದ್ದರು ಧನ ಕರುಗಳಿಗೆ ಮೇವಿನ ವ್ಯವಸ್ಥೆ ಮಾಡಿಲ್ಲ ಗೋ ಶಾಲೆಗಳನ್ನು ತೆರೆದಿಲ್ಲ ಎಂದು ಕೆ.ಟಿ. ಶಾಂತಕುಮಾರ್ ಆಪಾದಿಸಿದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಶಾಂತಿಯಿಂದ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಚುನಾವಣೆ

ಸೂರ್ಯಪ್ರಗತಿನ್ಯೂಸ್.ಕಾಂ



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಬೆಂಡೋಣೆ ಸಂಸ್ಥೆಯ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ ಅತ್ಯಂತ ಶಾಂತಿಯುತವಾಗಿ ಹಾಗೂ ಪ್ರಜಾಸತ್ತಾತ್ಮಕವಾಗಿ ನೆರವೇರಿದೆ. ನಿನೆ ನಡೆದ ಈ ಚುನಾವಣೆಯಲ್ಲಿ ಸಂಘದ ಮತದಾರ ಬಂಧುಗಳು ತಮ್ಮ ಹಕ್ಕನ್ನು ಚಲಾಯಿಸಿ, ಕ್ರಮಬದ್ಧವಾಗಿ 15 ಜನ ಅಭ್ಯರ್ಥಿಗಳನ್ನು ನೂತನ ನಿರ್ದೇಶಕರನ್ನಾಗಿ ವಿಜಯ್ ಶಂಕರ್ ಎಂಪಿ, ಹನುಮಂತರಾಯಪ್ಪ, ಅಶ್ವತಯ್ಯ, ಅಖಂಡ ಆರಾಧ್ಯ, ಮಂಜುನಾಥ್, ರಮ್ಯಾ, ಮಮತ, ರೇವಣ್ಣ ಸಿದ್ದಯ್ಯ, ರಮೇಶ್, ರವರು 6 ನಿರ್ದೇಶಕರು ಸಾಮಾನ್ಯ ಕ್ಷೇತ್ರದಿಂದ, 2 ಮಹಿಳಾ ಮೀಸಲು ಕ್ಷೇತ್ರ,1 ಪರಿಶಿಷ್ಟ ಜಾತಿ, 1 ಪರಿಶಿಷ್ಟ ಪಂಗಡ,2 ಹಿಂದುಳಿದ ವರ್ಗದಿಂದ ಆಯ್ಕೆ ಮಾಡಿದ್ದಾರೆ. ಈ ಅಭೂತ ಪೂರ್ವ ಗೆಲುವಿಗೆ ಕಾರಣಕರ್ತರಾದ ನಮ್ಮ ಸಂಘದ ಪ್ರತಿಯೊಬ್ಬ ಸದಸ್ಯರಿಗೂ ಮತ್ತು ರೈತ ಬಾಂಧವರಿಗೂ ನೂತನ ಆಡಳಿತ ಮಂಡಳಿಯ ಪರವಾಗಿ ಶಿರಸಾಷ್ಟಾಂಗ ಪ್ರಣಾಮಗಳು. ರೈತರ ಏಳಿಗೆಯೇ ನಮ್ಮ ಮೂಲ ಮಂತ್ರಸಹಕಾರ ಕ್ಷೇತ್ರವು ಕೃಷಿಕರ ಮತ್ತು ಗ್ರಾಮದ ಆರ್ಥಿಕ ಬೆನ್ನೆಲುಬಾಗಿದೆ. ಸಂಘದ ಮೂಲಕ ಲಭ್ಯವಾಗುವ ಸಾಲ ಸೌಲಭ್ಯಗಳು, ಸರ್ಕಾರದ ಯೋಜನೆಗಳು ಹಾಗೂ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಪ್ರತಿಯೊಬ್ಬ ಅರ್ಹ ರೈತರಿಗೂ ತಲುಪಿಸುವುದು ನಮ್ಮ ನೂತನ ಮಂಡಳಿಯ ಮೊದಲ ಆದ್ಯತೆಯಾಗಿರುತ್ತದೆ.

ನಮ್ಮ ಮುಂದಿನ ಐದು ವರ್ಷಗಳ ಧ್ಯೇಯೋದ್ದೇಶಗಳು:

ರೈತ ಸ್ನೇಹಿ ಆಡಳಿತ: ಸಂಘದಲ್ಲಿ ಪಾರದರ್ಶಕತೆ ಮತ್ತು ಕ್ಷಿಪ್ರ ಸೇವೆಗೆ ಒತ್ತು ನೀಡುವುದು.ಸಾಲ ಸೌಲಭ್ಯಗಳ ಸದುಪಯೋಗ: ಶೂನ್ಯ ಬಡ್ಡಿ ದರದ ಕೃಷಿ ಸಾಲ ಹಾಗೂ ಮಧ್ಯಮಾವಧಿ ಸಾಲಗಳನ್ನು ಸಮಯಕ್ಕೆ ಸರಿಯಾಗಿ ವಿತರಿಸುವುದು.

ತಂತ್ರಜ್ಞಾನದ ಬಳಕೆ: ಡಿಜಿಟಲೀಕರಣದ ಮೂಲಕ ಸಂಘದ ವಹಿವಾಟನ್ನು ಇನ್ನಷ್ಟು ಸುಲಭಗೊಳಿಸುವುದು.ಸಂಘದ ಪ್ರಗತಿ: ಎಲ್ಲಾ ರೈತ ಸದಸ್ಯರನ್ನು ಒಗ್ಗೂಡಿಸಿಕೊಂಡು ಬೆಂಡೋಣೆ ಸಹಕಾರ ಸಂಘವನ್ನು ತಾಲೂಕಿನಲ್ಲೇ ಮಾದರಿ ಸಂಘವನ್ನಾಗಿ ಬೆಳೆಸುವುದು.ಗೆಲುವು ಎನ್ನುವುದು ಅಧಿಕಾರವಲ್ಲ, ಅದೊಂದು ದೊಡ್ಡ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಮಗೆ ನೀಡಿದ ನಿಮ್ಮ ನಂಬಿಕೆಗೆ ಯಾವುದೇ ಕುಂದು ಬಾರದಂತೆ, ಬರುವ ಐದು ವರ್ಷಗಳ ಕಾಲ ಪ್ರಾಮಾಣಿಕವಾಗಿ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುತ್ತೇವೆ ಎಂದು ಈ ಮೂಲಕ ಭರವಸೆ ನೀಡುತ್ತಿದ್ದೇವೆ. ಈ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿ ಕೊಟ್ಟ ಚುನಾವಣಾಧಿಕಾರಿಗಳಿಗೂ, ಪೊಲೀಸ್ ಸಿಬ್ಬಂದಿಗೂ, ಸಂಘದ ಸಿಬ್ಬಂದಿ ವರ್ಗದವರಿಗೂ ಹಾಗೂ ಪೂಜಾ ಕಾರ್ಯಕ್ರಮದಲ್ಲಿ ಕೃಷ್ಣಪ್ಪ, ನರಸಿಂಹಮೂರ್ತಿ, ಪುಟ್ಟ ನರಸಯ್ಯ, ಕೇಬಲ್ ರಂಗಪ್ಪ, ಚಿಕ್ಕಣ್ಣ, ಶ್ರೀಧರ್, ಗೋಪಾಲಯ್ಯ, ಮಹಾಲಿಂಗಯ್ಯ, ನವೀನ್ ಮಹದೇವ್ ವಿಜಿ ಕುಮಾರ್, ಸಿದ್ದಲಿಂಗಪ್ಪ ಮಲ್ಲೇಕಾವ್, ದೇವರಾಜ್, ಹನುಮಂತರಾಯಪ್ಪ, ನಾಗಣ್ಣ ಮಾರಿಪಾಳ್ಯ, ಅಹೋರಾತ್ರಿ ಶ್ರಮಿಸಿದ ಪ್ರತಿಯೊಬ್ಬ ಕಾರ್ಯಕರ್ತರಿಗೂ ಧನ್ಯವಾದಗಳು ತಿಳಿಸಿದರು

ದಲಿತ ಯುವಕ ಸಿಂಹಾದ್ರಿ ಹತ್ಯೆ ಖಂಡಿಸಿ ಕುಣಿಗಲ್ ನಲ್ಲಿ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ



ಕುಣಿಗಲ್: ಯಾವುದೇ ಸರ್ಕಾರಗಳು ದಲಿತರ ಪರವಾಗಿಲ್ಲ ದಲಿತರ ಮೇಲೆ ನಿರಂತರ ವಾಗಿ ದೌರ್ಜನ್ಯ, ಕೊಲೆ, ಅತ್ಯಾಚಾರ, ನಡೆಯುತ್ತಿದ್ದರೂ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ ಎಂದು ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ತೀವ್ರ ಅಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಜಿಲ್ಲೆಯ ಮಧುಗಿರಿ ತಾಲೂಕಿನ ಕಾಸಪುರ ಗ್ರಾಮದ ದಲಿತ ಯುವಕ ಸಿಂಹಾದ್ರಿ ಹತ್ಯೆ ಖಂಡಿಸಿ ದಲಿತ ಸಂಘಟನೆಗಳ ಸಭೆಯ ಉದ್ದೇಶಿಸಿ ಮಾತನಾಡಿ ಕ್ಷುಲ್ಲಕ ಕಾರಣಗಳಿಗಾಗಿ ದಲಿತರನ್ನು ಹತ್ಯೆ ಮಾಡುತ್ತಿದ್ದರೂ ಸಂಸದ ರಾಗಲಿ, ಸಚಿವ ರಾಗಲಿ, ಶಾಸಕ ರಾಗಲಿ, ದಲಿತರ ಪರವಾಗಿ ಧ್ವನಿಯೆತ್ತದಿರುವುದು ಖಂಡನೀಯ, ಆದರೂ ನಾವು ದಲಿತರ ಪರವಾಗಿದ್ದೇವೆ, ದಲಿತ ಉದ್ಧಾರಕರು ಎಂದು ರಾಜಕೀಯ ಡೊಂಬರಾಟ ವಾಡುತ್ತಿದ್ದಾರೆ ಎಂದುರು.

ಜಿಲ್ಲಾಡಳಿತ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವಲ್ಲಿ ವಿಫಲವಾಗಿದೆ, ಕ್ಷುಲ್ಲಕ ಕಾರಣಕ್ಕಾಗಿ ಕೊಲೆ, ಅತ್ಯಾಚಾರ, ದೌರ್ಜನ್ಯಗಳು ನಡೆದಾಗ ಪ್ರಕರಣ ದಾಖಲಿಸಿ ಕೊಂಡು ಪರಿಹಾರ ಕೊಟ್ಟು ಕೈ ತೊಳೆದು ಕೊಂಡರೆ ಸಾಲದು, ಸರ್ಕಾರ ದಲಿತರ ಜೀವಗಳನ್ನ ರಕ್ಷಿಸುವ ಕ್ರಮಗಳನ್ನ ಕೈಗೊಳ್ಳಬೇಕು ಮತ್ತು ಕಾಯ್ದೆಗಳನ್ನ ಜಾರಿಗೊಳಿಸಬೇಕು . ದಲಿತರು ಗೃಹ ಮತ್ತು ಕಂದಾಯ ಸಚಿವರಾದಾಗಲೇ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತವೆ, ದಲಿತರ ಭೂಮಿಯನ್ನ ಕಸಿದುಕೊಳ್ಳುವ ಪ್ರಯತ್ನಗಳು ನಡೆಯುತ್ತವೆ, ಸಮುದಾಯಗಳ ಮೇಲೆ ದೌರ್ಜನ್ಯಗಳು ನಡೆದಾಗ ರಾಜಕಾರಣ ವನ್ನು ಬದಿಗೊತ್ತಿ ಒಂದಾಗಿ ಸಮುದಾಯದ ಪರವಾಗಿ ನಿಂತು ಹೋರಾಟ ಮಾಡಬೇಕು ಎಂದರು.

ಪಟ್ಟಣಗಳಲ್ಲಿ ಗಣೇಶನನ್ನು ವಿಸರ್ಜಿಸುವ ಸಂದರ್ಭದಲ್ಲಿ ಸಾಕಷ್ಟು ಮುತುವರ್ಜಿ ವಹಿಸುವ ಪೊಲೀಸರು ಗ್ರಾಮಾಂತರ ಪ್ರದೇಶದ ಕೆಲವು ಗ್ರಾಮಗಳಲ್ಲಿ ಅಷ್ಟೇ ಮುತುವರ್ಜಿ ವಹಿಸಿ ಸ್ವಲ್ಪ ಎಚ್ಚರ ವಹಿಸಿದ್ದರೆ ಸಿಂಹಾದ್ರಿ ಇಂದು ಬದುಕುಳಿಯುತ್ತಿದ್ದನು, ಸಿಂಹಾದ್ರಿ ಸಾವಿಗೆ ಪೊಲೀಸರ ವೈಫಲ್ಯವೇ ಕಾರಣ, ಜಿಲ್ಲಾಡಳಿತ ಸಿಂಹಾದ್ರಿ ಸಾವಿನ ಹೊಣೆಯನ್ನ ನೇರವಾಗಿ ಹೊರಬೇಕು .

ತಾಲೂಕಿನಲ್ಲೂ ದಲಿತರು ಮತ್ತು ಬಲಾಢ್ಯರ ನಡುವೆ ಭೂ ವಿವಾದಗಳು ನಡೆಯುತ್ತಿವೆ, ತಾಲ್ಲೂಕು ಆಡಳಿತ ಸಮಸ್ಯೆ ಬಗೆಹರಿಸ ದಿದ್ದರೆ ದಲಿತರು ಮತ್ತು ಬಲಾಢ್ಯರ ನಡುವೆ ದ್ವೇಷಗಳು ಬೆಳೆಯುವುದರ ಜೊತೆಗೆ ದಲಿತರ ಮೇಲೆ ದೌರ್ಜನ್ಯಗಳು ನಡೆಯುವ ಸಂಭವವಿದೆ ಎಂದರು.ದಲಿತ ಯುವಕ ನನ್ನ ಕೊಂದ ಆರೋಪಿ ಮತ್ತು ಹತ್ಯೆಗೆ ಕುಮಕ್ಕು ನೀಡಿದ ಆರೋಪಿಗಳ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಗಡಿಪಾರು ಮಾಡಬೇಕು ಮತ್ತು ಮಗನನ್ನ ಕಳೆದುಕೊಂಡ ತಾಯಿಗೆ ಐದು ಲಕ್ಷ ಪರಿಹಾರ ಮತ್ತು ಎರಡು ಎಕರೆ ಜಮೀನು ಕೊಡಬೇಕು ಎಂದರು.

ಸಿರಸ್ತೆದಾರ್ ನಾಗಮ್ಮ ಮನವಿ ಸ್ವೀಕರಿಸಿದರು ತಹಶಿಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ರವಾನಿ ಸುವಂತೆ ದಲಿತ ಸಂಘಟನೆಗಳು ಪದಾಧಿಕಾರಿಗಳು ಒತ್ತಾಯಿಸಿದರು.

ಪ್ರತಿಭಟನೆ ಯಲ್ಲಿ ಒಕ್ಕೂಟದ ಪದಾಧಿಕಾರಿ ಗಳಾದ ವಿ, ಶಿವಶಂಕರ್, ಎಸ್, ಆರ್, ಚಿಕ್ಕಣ್ಣ, ದಲಿತ್ ನಾರಾಯಣ್, ಜಿ, ಕೆ,ನಾಗಣ್ಣ, ಎಸ್, ಟಿ, ರಾಜು, ಭಕ್ತರಹಳ್ಳಿ ಕುಮಾರ್, ಎನ್, ಆರ್, ಲಕ್ಷ್ಮಿ ನಾರಾಯಣ್, ಶೇಷಣ್ಣ, ಶ್ರೀನಿವಾಸ್, ಆನಂದ್, ಪ್ರಶಾಂತ್, ರಾಮಕೃಷ್ಣ, ಲಕ್ಷ್ಮೀನರಸಿಂಹ, ವನಜ, ಸಿದ್ದರಾಜು, ಅನೇಕ ಮುಖಂಡರು ಇದ್ದರು

ಸಣ್ ಸುದ್ದಿ

ಬಡವರನ್ನು ನಂಬಿ ರಾಜಕಾರಣ ಮಾಡುತ್ತಿದ್ದೇನೆ



ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ ಬಡವರನ್ನು ನಂಬಿ ರಾಜಕಾರಣ ಮಾಡುತ್ತಿದ್ದೇನೆ ಎಂದು ಮಾಜಿ ಸಚಿವರು ಹಾಗೂ ಶಾಸಕರಾದ ಕೆಎನ್ ರಾಜಣ್ಣ ತಿಳಿಸಿದರು ತಾಲೂಕಿನ ದೊಡ್ಡೇರಿ ಹೋಬಳಿ ರಂಟವಳಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಂಪ ಚಿನ್ನೆನಹಳ್ಳಿ ಗ್ರಾಮದಲ್ಲಿ ವಿನಾಯಕ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಗಣಪತಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಎಲ್ಲಾ ಜಾತಿಯಲ್ಲೂ ಬಡವರಿದ್ದಾರೆ ಆ ಬಡವರ ಆಶೀರ್ವಾದದಿಂದ ರಾಜಕಾರಣ ಮಾಡುತ್ತಿದ್ದೇನೆ 2004ರಲ್ಲಿ ಜಾತ್ಯತೀತ ಜನತಾದಳದಿಂದ ಸ್ಪರ್ಧಿಸಿದಾಗ ದೊಡ್ಡೇರಿ ಹೋಬಳಿಯಲ್ಲಿ 8000 ಲೀಡ್ ನೀಡಿದ್ದರಿಂದ ಅಂದು ಗೆಲ್ಲಲು ಸಾಧ್ಯವಾಯಿತು ನಾನು ಶಾಸಕರಾಗಿ ಆಯ್ಕೆಯಾದ ನಂತರ ಜನಸಾಮಾನ್ಯರ ವೈಯಕ್ತಿಕ ಸಮಸ್ಯೆ ಗ್ರಾಮಗಳ ಅಭಿವೃದ್ಧಿಗೆ ಬದ್ಧವಾಗಿ ಕೆಲಸ ಇರುವುದರಿಂದ ಬಡಜನರ ವಿಶ್ವಾಸ ಗಳಿಸಲು ಸಾಧ್ಯವಾಯಿತು 2018 ರಲ್ಲಿ ಸ್ವಲ್ಪ ಹಿನ್ನಡೆಯಾದರೂ 2023ರಲ್ಲಿ 36,000 ಅಧಿಕ ಮತಗಳ ಅಂತರದಿಂದ ಆಯ್ಕೆಯಾಗಿದ್ದು ಜಿಲ್ಲೆಯಲ್ಲಿ ಯಾವುದೇ ಶಾಸಕರು ಇಷ್ಟೊಂದು ಬಹುಮತದಿಂದ ಆಯ್ಕೆಯಾಗಿಲ್ಲ ಎಂದ ಅವರು ಪ್ರತಿಯೊಬ್ಬ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿದಾಗ ಮಾತ್ರ ಪ್ರತಿಯೊಬ್ಬರ ವಿಶ್ವಾಸ ಗಳಿಸಲು ಸಾಧ್ಯ ಎಂದು ತಿಳಿಸಿದರು ಕೆಂಪ ಚನ್ನೇನಹಳ್ಳಿ ಗ್ರಾಮಕ್ಕೆ ಶುದ್ಧ ಕುಡಿಯುವ ನೀರು ಘಟಕ ಮತ್ತು ರಸ್ತೆ ಅಭಿವೃದ್ಧಿ ಮಾಡುವುದಾಗಿ ತಿಳಿಸಿದರು ಈ ಸಂದರ್ಭದಲ್ಲಿ ಮುಖಂಡರಾದ ದ್ರುವ ಕುಮಾರ್ ಮಾತನಾಡಿ ಕೆ ಎನ್ ರಾಜಣ್ಣ ರವರಿಂದ ಮಾತ್ರ ಕ್ಷೇತ್ರದ ಅಭಿವೃದ್ಧಿ ಸಾಧ್ಯ ನಾವು ಸದಾ ಅವರ ಜೊತೆ ಇರುತ್ತೇವೆ ಎಂದು ತಿಳಿಸಿದರು ಇದೇ ಸಂದರ್ಭದಲ್ಲಿ ಅನಾರೋಗ್ಯದಿಂದ ಬಳಲುತ್ತಿರುವ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಸಿಡದರಗಲ್ಲು ನಾಗಭೂಷಣ್ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು ಈ ಸಂದರ್ಭದಲ್ಲಿ ಮುಖಂಡರುಗಳಾದ ಹರ್ಷ ಕುರುಬರಹಳ್ಳಿ ಲಂಕಪ್ಪ ಸಣ್ಣರಾಮಯ್ಯ ಮಹೇಶ್ ರಂಗನಾಥ್ ಸವಿತಾ ರಂಗನಾಥ್ ನಾಗರತ್ನಮ್ಮ ಮತ್ತಿತರರು ಹಾಜರಿದ್ದರು

ನ್ಯಾಯಬೆಲೆ ಅಂಗಡಿ : ವೇಳಾಪಟ್ಟಿ ಪರಿಷ್ಕರಿಸಿ

ತುಮಕೂರು: ಸಾರ್ವಜನಿಕ ವಿತರಣಾ ಪದ್ಧತಿಯಡಿ ಸರ್ಕಾರದ ಎನ್.ಎಫ್.ಎಸ್.ಎ. ಮತ್ತು ಅನ್ನಭಾಗ್ಯ ಯೋಜನೆಯ ಪಡಿತರವನ್ನು ಅಕ್ಟೋಬರ್ 1 ರಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ನ್ಯಾಯಬೆಲೆ ಅಂಗಡಿಗಳ ವೇಳಾಪಟ್ಟಿಯನ್ನು ಪರಿಷ್ಕರಿಸಿ ಸರ್ಕಾರ ಆದೇಶಿಸಿದೆ. ಅದರಂತೆ ಜಿಲ್ಲೆಯ ಎಲ್ಲಾ ನ್ಯಾಯಬಲೆ ಅಂಗಡಿಗಳು ಬೆಳಗ್ಗೆ 7 ರಿಂದ ಮಧ್ಯಾಹ್ನ 12 ಹಾಗೂ ಸಂಜೆ 4 ರಿಂದ ರಾತ್ರಿ 8 ಗಂಟೆಯವರೆಗೆ ಕಡ್ಡಾಯವಾಗಿ ತೆರೆದು ಪಡಿತರ ಚೀಟಿದಾರರಿಗೆ ಪಡಿತರ ವಿತರಣೆ ಮಾಡಬೇಕೆಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸೂಚಿಸಿದ್ದಾರೆ.

ಬರಗಾಲ ರೈತರ ಆತ್ಮ ವಿಶ್ವಾಸವನ್ನು ಕುಗ್ಗಿಸಿದೆ

ಶಿರಾ : ರಾಜ್ಯದಲ್ಲಿ ಬರಗಾಲ ರೈತರ ಆತ್ಮವಿಶ್ವಾಸವನ್ನು ಕುಗ್ಗಿಸಿದ್ದು, ಶಿರಾ ಬರಪೀಡಿತ ಎಂದು ಘೋಷಣೆ ಮಾಡಿದ್ದು ಸರ್ಕಾರತಕ್ಷಣ ಬರಪೂರ ಕಾಮಗಾರಿಗಳನ್ನು ಆರಂಭಿಸಿ ರೈತರ ನೆರವಿಗೆ ಧಾವಿಸ ಬೇಕು. ಅನ್ನದಾತನ ಸಂಕಷ್ಟಶ್ರೀ ಅಂಭಾ ದೇವಿ ದೂರ ಮಾಡಲಿಎಂದು ಪ್ರಾರ್ಥಿಸುವುದಾಗಿಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಮುದಮಡು ರಂಗಸ್ವಾಮಿ ಹೇಳಿದರು.ಶಿರಾ ತಾಲೂಕಿನ ಹುಲಿಕುಂಟೆ ಹೋಬಳಿಯ ಹೊಸಹಳ್ಳಿ ಗ್ರಾಮದ ಪ್ರಸಿದ್ಧ ಶ್ರೀ ಅಂಭಾದೇವಿ ದೇವಸ್ಥಾನದಲ್ಲಿ ಶ್ರೀದೇವಿಗೆ ರೈತರಸಂಕಷ್ಟ ದೂರ ಮಾಡಿ ನಾಡಿಗೆ ಸುಭಿಕ್ಷ ಕರುಣಿಸಲಿ ಎಂದು ಶ್ರೀ ಅಂಬಾ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.ಪ್ರಸಿದ್ಧ ಶ್ರೀ ಅಂಭಾ ದೇವಿ ಸುಕ್ಷೇತ್ರ ದೇವಿಯ ದೈವಿಕ ಪವಾಡ ಹೊಂದಿದ್ದು ಭಕ್ತರ ಇಷ್ಟಾರ್ಥ ಸಿದ್ಧಿ ಗೊಳಿಸುವ ಮಹಾತಾಯಿಯಪುಣ್ಯಕ್ಷೇತ್ರ ಎಂದರು.ಪತ್ರಕರ್ತ ಪ್ರವೀಣ್ ಹುಲಿಕುಂಟೆ, ಸರ್ವೆ ಪರಿವೀಕ್ಷಕ ಸಿ ಕೆ ಭೀಮಣ್ಣ, ಶ್ರೀ ಅಂಬಾದೇವಿ ದೇವಸ್ಥಾನ ಪ್ರಧಾನ ಅರ್ಚಕ ಶಶಿಧರ,ವೇದಪಂಡಿತ ಗೌತಮ್,ಮುಖಂಡರಾದ ರಮೇಶ್ ಮಂಜುನಾಥ್ ಮಹಾಂತೇಶ್ ಪ್ರಕಾಶ್ ಸೇರಿದಂತೆ ಹಲವಾರು ಮುಖಂಡರು ಇದ್ದಾರೆ.

ಸಿಇಸಿ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಿ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯಸಮ್ಮತತೆಯನ್ನು ಖಚಿತಪಡಿಸಬೇಕು ಎಂದು ಒತ್ತಾಯಿಸಿರುವ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ತುಮಕೂರು ಜಿಲ್ಲಾ ಅಧ್ಯಕ್ಷ ತಾಜುದ್ದೀನ್ ಶರೀಫ್, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಮತದಾರರ ಪಟ್ಟಿಯ ಪರಿಷ್ಕರಣೆ, ಹೆಸರುಗಳ ಸೇರ್ಪಡೆ, ಅಳಿಸುವಿಕೆ ಹಾಗೂ ಮರುಸ್ಥಾಪನೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಸಾರ್ವಜನಿಕ ವಲಯದಲ್ಲಿ ಹಲವು ಪ್ರಶ್ನೆಗಳು ಎದ್ದಿವೆ. ಅರ್ಹ ಮತದಾರರ ಹೆಸರುಗಳು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಕೈಬಿಡದಂತೆ ಹಾಗೂ ಪ್ರತಿಯೊಬ್ಬ ಅರ್ಹ ನಾಗರಿಕನಿಗೂ ಮತದಾನದ ಹಕ್ಕು ಖಚಿತವಾಗುವಂತೆ ಚುನಾವಣಾ ಪ್ರಕ್ರಿಯೆ ಪಾರದರ್ಶಕವಾಗಿರಬೇಕು ಎಂದು ಅವರು ಒತ್ತಾಯಿಸಿದ್ದಾರೆ.

SIR ಪ್ರಕ್ರಿಯೆಯ ಸಂದರ್ಭದಲ್ಲಿ ಬಡವರು, ಕಾರ್ಮಿಕರು, ವಲಸೆ ಕಾರ್ಮಿಕರು ಹಾಗೂ ಇತರೆ ದುರ್ಬಲ ವರ್ಗಗಳ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ತಪ್ಪಾಗಿ ಮತದಾರರ ಪಟ್ಟಿಯಿಂದ ಕೈಬಿಡಲಾದ ಅರ್ಹ ಮತದಾರರ ಹೆಸರುಗಳನ್ನು ತಕ್ಷಣ ಮರುಸ್ಥಾಪಿಸಬೇಕು ಎಂದು ತಾಜುದ್ದೀನ್ ಶರೀಫ್ ಆಗ್ರಹಿಸಿದ್ದಾರೆ.

ಭಾರತೀಯ ಚುನಾವಣಾ ಆಯೋಗದ ಸ್ವತಂತ್ರ, ನಿಷ್ಪಕ್ಷಪಾತ ಮತ್ತು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಕುರಿತು ಜನರಲ್ಲಿ ವಿಶ್ವಾಸ ಉಳಿಯುವುದು ಅತ್ಯಂತ ಅಗತ್ಯವಾಗಿದೆ. ಆದ್ದರಿಂದ ಚುನಾವಣಾ ಆಯೋಗದ ಕಾರ್ಯವೈಖರಿಯಲ್ಲಿ ಸಂಪೂರ್ಣ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸಲು ಅಗತ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಹಿರಿಯನಾಗರಿಕರನ್ನು ಗೌರವಿಸಿ–ನ್ಯಾ.ಲೋಕೇಶ್ ಧನಪಾಲ ಹವಲೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಹಿರಿಯನಾಗರಿಕರನ್ನು ಗೌರವಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯಕಾರ್ಯದರ್ಶಿ ಲೋಕೇಶ್ ಧನಪಾಲ ಹವಲೆ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ ಹಾಗೂ ಮತ್ತಿತರ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಸೋಮವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೇಂದ್ರ ಸರ್ಕಾರದ ಖಣಚಿಣಜ ಂಛಿಣಿಠಟಿ ಞಟಚಿಟ ಜಿಠಡಿ ಖಜಿಟಿಠಡಿ ಅಣಥಿಡಜಟಿ ಯೋಜನೆಯಡಿ ಪೋಷಕರು ಹಾಗೂ ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ–2007 ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಕಾರ್ಯನಿರ್ವಹಣಾಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ಅರಿವು ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಹಿರಿಯನಾಗರಿಕರಿಗೆ ಲಭ್ಯವಿರುವ ವಿವಿಧ ಸರ್ಕಾರಿ ಯೋಜನೆ ಮತ್ತು ಸೌಲಭ್ಯಗಳ ಕುರಿತು ಅಧಿಕಾರಿಗಳು ಸಂಪೂರ್ಣ ಮಾಹಿತಿ ಪಡೆದು, ಅವುಗಳನ್ನು ಅರ್ಹರಿಗೆ ತಲುಪಿಸುವ ಕಾರ್ಯ ಮಾಡಬೇಕು. ಹಿರಿಯ ನಾಗರಿಕರಿಗೆ ಸರ್ಕಾರದ ಸೌಲಭ್ಯಗಳು ದೊರೆಯುತ್ತಿವೆಯೇ ಎಂಬುದನ್ನು ಪರಿಶೀಲಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದರು.

ಮಕ್ಕಳು ತಮ್ಮ ವಯಸ್ಸಾದ ತಂದೆ–ತಾಯಿಯನ್ನು ಮಕ್ಕಳಂತೆ ಆರೈಕೆ ಮಾಡಬೇಕು. ಹಿರಿಯರನ್ನು ಗೌರವಿಸುವ ಸಂಸ್ಕಾರವನ್ನು ಮಕ್ಕಳಿಗೆ ಬಾಲ್ಯದಿಂದಲೇ ಕಲಿಸಬೇಕು. ನಮ್ಮ ದೇಶದ ಸಂಪ್ರದಾಯ, ಸಂಸ್ಕೃತಿ ಹಾಗೂ ನೈತಿಕ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ. ಶ್ರವಣ ಕುಮಾರನಂತಹ ಆದರ್ಶ ವ್ಯಕ್ತಿಗಳ ಜೀವನದಿಂದ ಮಕ್ಕಳು ಕಲಿಯಬೇಕು ಎಂದು ಹೇಳಿದರು.

ಹಿರಿಯನಾಗರಿಕರ ಸಮಸ್ಯೆಗಳಿಗೆ ಕಾನೂನುಬದ್ಧ ಪರಿಹಾರ ದೊರೆಯುವಂತೆ ಸಂಬಂಧಿಸಿದ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಒಗ್ಗೂಡಿ ಕೆಲಸ ಮಾಡಿದಲ್ಲಿ ಹಿರಿಯನಾಗರಿಕರಿಗೆ ಹೆಚ್ಚಿನ ನೆರವು ನೀಡಲು ಸಾಧ್ಯವಾಗುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಡಾ: ಸಿದ್ದರಾಮಣ್ಣ ಮಾತನಾಡಿ, ಹಿರಿಯ ನಾಗರಿಕರಿಗೆ ಸಮಸ್ಯೆಗಳಿಗಿಂತ ಸವಾಲುಗಳು ಹೆಚ್ಚಾಗಿದ್ದು, ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯತತ್ಪರರಾಗಬೇಕು ಎಂದರು.

ಕಾರ್ಯಾಗಾರದಲ್ಲಿ ವಿಕಲಚೇತನರ ಹಾಗೂ ಹಿರಿಯನಾಗರಿಕರ ಕಲ್ಯಾಣಾಧಿಕಾರಿ ಶಿಲ್ಪ ಎಂ. ದೊಡ್ಡಮನಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾ ಅಧ್ಯಕ್ಷೆ ಬಾ.ಹ. ರಮಾಕುಮಾರಿ, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಸಂಕಷ್ಟಕ್ಕೆ ಸ್ಪಂದಿಸದೆ ಸರ್ಕಾರಗಳ ವಿರುದ್ಧ ರೈತ ಸಂಘ ಬೃಹತ್ ಪ್ರತಿಭಟನೆ ಬೆಳೆ ನಷ್ಟ ಪರಿಹಾರಕ್ಕೆ ರೈತರ ಆಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು:ಭೀಕರ ಬರಗಾಲದ ಸಂಕಷ್ಟಕ್ಕೆ ಸ್ಪಂದಿಸದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯವನ್ನು ಖಂಡಿಸಿ, ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಒತ್ತಾಯಿಸಿ, ಕೃಷಿಕರ ಸಂಪೂರ್ಣ ಸಾಲ ಮನ್ನಾ ಮಾಡಲು, ಬೆಳೆನಷ್ಟಕ್ಕೆ ವೈಜ್ಞಾನಿಕ ಪರಿಹಾರ ತುಂಬಿಕೊಡಲು, ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಕೈಬಿಡಲು, ಜಿಲ್ಲೆಯ ಎಲ್ಲಾ ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು, ನಂದಿಹಳ್ಳಿ ವಸಂತನರಸಾಪುರ ರಿಂಗ್ ರಸ್ತೆಗೆ ಸ್ವಾಧೀನ ಮಾಡಲು ಹೊರಟಿರುವ ಭೂ ಸ್ವಾಧೀನವನ್ನು ಕೈಬಿಡಲು ಆಗ್ರಹಿಸಿ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ಜಿಲ್ಲೆಯ ರೈತರು ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರಪ್ಪ, ರಾಜ್ಯ ಕಾರ್ಯಾಧ್ಯಕ್ಷರು ಮತ್ತು ಜಿಲ್ಲಾಧ್ಯಕ್ಷರಾದ ಎ.ಗೋವಿಂದರಾಜು ಮುಂತಾದ ಮುಖಂಡರ ನೇತೃತ್ವದಲ್ಲಿ ನಗರದ ಬಿಜಿಎಸ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿದ ರೈತರು, ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರಪ್ಪ ಮಾತನಾಡಿ, ರಾಜ್ಯದಲ್ಲಿ ಭೀಕರ ಬರಪರಿಸ್ಥಿತಿ ಎದುರಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ ಸರ್ಕಾರಗಳು ರೈತರ ರಕ್ಷಣೆಗೆ ಬಂದಿಲ್ಲ. ರಾಜ್ಯದಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷಗಳು ಸತ್ತುಹೋಗಿವೆ. ರಾಜ್ಯದ ಪ್ರಮುಖ ಮೂರು ಪಕ್ಷಗಳಿಂದ ರೈತರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಇಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೈಯಲ್ಲಿ ರಾಜ್ಯ ಸರ್ಕಾರವಿಲ್ಲ, ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಕೈಯಲ್ಲಿ ಆ ಸರ್ಕಾರವಿಲ್ಲ. ಅಧಿಕಾರದಲ್ಲಿರುವವರು ಕಾರ್ಪೊರೇಟ್ ಗುಲಾಮರಾಗಿ ನಡೆದುಕೊಳ್ಳುತ್ತಿದ್ದಾರೆ. ರೈತರ ಫಲವತ್ತಾದ ಜಮೀನನ್ನು ಕಾರ್ಪೊರೇಟ್ ಕಂಪನಿಗಳಿಗೆ ಕೊಡುವ ಬಗ್ಗೆ ಕಾನೂನು ಮಾಡಿಕೊಂಡಿದ್ದಾರೆಯೇ ಹೊರತು ರೈತರ ಹಿತ ಬೇಕಾಗಿಲ್ಲ ಎಂದು ಟೀಕಿಸಿದರು.

ರೈತ ಸಂಘ ಕೇವಲ ರೈತರ ಸಮಸ್ಯೆ, ಬೇಡಿಕೆ, ಸಾಲ ಮನ್ನಾ, ನೀರಾವರಿ ಯೋಜನೆ ಮುಂತಾದವುಗಳ ಬಗ್ಗೆ ಹೋರಾಟ ಮಾಡುವುದಲ್ಲ. ರಾಜ್ಯದ ಜನರ ಹಿತಾಸಕ್ತಿಗಾಗಿ ರಾಜಕೀಯ, ಸಾಮಾಜಿಕ ವ್ಯವಸ್ಥೆ ಬದಲಾವಣೆಗಾಗಿ ಹೋರಾಟ ಮಾಡಬೇಕು. ಈಗಿನ ರಾಜಕೀಯ ಪಕ್ಷಗಳಿಂದ ಯಾವುದೇ ಪ್ರಯೋಜನವಿಲ್ಲ. ಪರ್ಯಾಯ ಪಕ್ಷದ ಅಗತ್ಯವಿದೆ ಎಂದು ಹೇಳಿದರು.

ರೈತ ಸಂಘ ಜಿಲ್ಲಾಧ್ಯಕ್ಷ ಎ. ಗೋವಿಂದರಾಜು ಮಾತನಾಡಿ, ಕೃಷಿಗೆ ಪ್ರಥಮ ಆದ್ಯತೆ ನೀಡಿ ಸರ್ಕಾರ ಒಪ್ಪಿಕೊಂಡಿರುವಂತೆ ಕನಿಷ್ಠ 7 ಗಂಟೆಗಳ ವಿದ್ಯುತ್ ಅನ್ನು ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಬೇಕು. ಅಕ್ರಮ ಸಕ್ರಮ ಯೋಜನೆಯಲ್ಲಿ ಬಾಕಿಯಿರುವ ರೈತರಿಗೆ ತುರ್ತಾಗಿ ಸಂಪರ್ಕ ಕಲ್ಪಿಸಬೇಕು, ಬಾಕಿ ಇರುವ ಉಪಸೌಧ, 220 ಕೆ.ವಿ. ಸ್ಟೇಷನ್‌ಗಳು, ಲಿಂಕ್ ಲೈನ್‌ಗಳ ಕೆಲಸ ತುರ್ತಾಗಿ ಮುಗಿಸಬೇಕು. ಹಳೆ ಕಂಬ, ವೈರ್ ಮತ್ತು ಸುಟ್ಟ ಪರಿವರ್ತಕಗಳನ್ನು 48 ಗಂಟೆಯೊಳಗೆ ಪೂರೈಸಬೇಕು ಎಂದು ಒತ್ತಾಯಿಸಿದರು.

2500 ರೂ. ಭಿಕ್ಷೆ ಬೇಡ:

ರೈತರಿಗೆ ಬರ ಪರಿಹಾರವಾಗಿ ನೀಡುವ 2500 ರೂ.ಗಳ ಭಿಕ್ಷೆ ಬೇಡ, ಇಷ್ಟು ದುಡ್ಡು ಕೊಟ್ಟು ರೈತರನ್ನು ಅವಮಾನಿಸಬೇಡಿ. ಆ ಎರಡೂವರೆ ಸಾವಿರ ರೂ. ಪಡೆಯಲು ಕಚೇರಿಗೆ ಅಲೆದಾಡಲು ಅಷ್ಟೂ ದುಡ್ಡು ಖರ್ಚಾಗುತ್ತದೆ. ವೈಜ್ಞಾನಿಕವಾಗಿ ಪರಿಹಾರ ನೀಡಬೇಕು ಎಂದು ಹೇಳಿದರು.

ಉತ್ಪಾದನಾ ವೆಚ್ಚ ಹೆಚ್ಚಿರುವುದರಿಂದ ಹಾಲಿನ ದರ ಕನಿಷ್ಠ ಲೀಟರ್‌ಗೆ 60 ರೂ. ಬೆಲೆ ನೀಡಬೇಕು. ಪಶು ಆಹಾರವನ್ನು ರಿಯಾಯಿತಿ ದರದಲ್ಲಿ ಪೂರೈಸಬೇಕು. ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನವನ್ನು 10 ರೂ. ಹೆಚ್ಚಿಸಬೇಕು. ಹತ್ತಿ ಬೀಜದ ಕಂಪನಿಗಳು ರೈತರಿಗೆ ನೀಡಬೇಕಾಗಿರುವ ಬಾಕಿ ಹಣವನ್ನು ಕೂಡಲೇ ಪಾವತಿಸಬೇಕು ಅಲ್ಲದೇ ಅಧಿಕೃತವಾಗಿ ಕರಾರು ಮಾಡಿಕೊಂಡು ವ್ಯವಹರಿಸಬೇಕು. ಕರ್ನಾಟಕದಲ್ಲೇ ಹೆಚ್ಚು ಹುಣಸೆ ಉತ್ಪಾದನೆ ಮಾಡುವ ಜಿಲ್ಲೆಯ ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ತಾಲೂಕುಗಳ ರೈತರಿಗೆ ಅನುಕೂಲವಾಗುವಂತೆ ಹುಣಸೆ ಮಂಡಳಿ ರಚಿಸಿ ಹುಣಸೆ ಉತ್ಪಾದಕರನ್ನು ರಕ್ಷಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯ ಮಾಡಿದರು.

ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಬೇಡ:

ಜಿಲ್ಲೆಯ ಸುಮಾರು 6 ತಾಲೂಕುಗಳಿಗೆ ಶಾಶ್ವತ ಅಪಾಯವನ್ನು ತಂದೊಡ್ಡುವ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಯನ್ನು ಕೈಬಿಡಬೇಕು, ಮೂಲನಾಲೆಯ ಮುಖಾಂತರವೇ ಕುಣಿಗಲ್ ಭಾಗಕ್ಕೆ ನೀರು ಹರಿಸಬೇಕು. ಹೇಮಾವತಿ ನದಿಯಿಂದ ಮಳೆಗಾಲದಲ್ಲಿ ಹೆಚ್ಚಾಗಿ ಸಮುದ್ರ ಸೇರುವ ನೀರನ್ನು ಜಿಲ್ಲೆಯ ಬಯಲು ಸೀಮೆ ಪ್ರದೇಶಗಳಾದ ಕೊರಟಗೆರೆ, ಮಧುಗಿರಿ, ಪಾವಗಡ ಭಾಗದ ಕೆರೆಗಳಿಗೆ ನೀರು ಹರಿಸಲು ಯೋಜನೆ ರೂಪಿಸಬೇಕು. ಆ ಸಂಬಂಧ ನ್ಯಾಯಾಲಯಗಳು ಹೆಚ್ಚಿನ ಪರಿಹಾರಕ್ಕೆ ಆದೇಶ ಮಾಡಿರುವ ಸಂಬಂಧ ಸುಮಾರು 500 ಕೋಟಿ ಹಣ ಬಾಕಿ ಇದ್ದು, ಬಾಕಿ ಹಣವನ್ನು ತುರ್ತಾಗಿ ಪಾವತಿಸಬೇಕು ಎಂದು ಗೋವಿಂದರಾಜು ಆಗ್ರಹಿಸಿದರು.

ರೈತರ ಜಮೀನು ವಾಪಸ್ ಕೊಡಿಸಿ:

ಹಣ ನೀಡದೆ ಯಾವ ಇಲಾಖೆಯಲ್ಲಿಯೂ ಕೆಲಸಗಳಾಗುತ್ತಿಲ್ಲ. ಜಿಲ್ಲಾಡಳಿತ ಈ ಸಂಬಂಧ ಕಟ್ಟುನಿಟ್ಟಿನ ಕ್ರಮವಹಿಸಿ ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ತುರುವೇಕೆರೆ ತಾಲೂಕು ತಾಳೇಕೆರೆ ಗ್ರಾಮದ ಕೃಷ್ಣಪ್ಪ, ಚಂದ್ರಯ್ಯ, ನಾಗರಾಜು ಮತ್ತು ಆನಂದ್‌ರವರ 4 ಕೋಟಿಗೂ ಹೆಚ್ಚು ಬೆಲೆ ಬಾಳುವ 4.13 ಎಕರೆ ಜಮೀನನ್ನು ಕರ್ನಾಟಕ ಬ್ಯಾಂಕಿನವರು ತಾವು ನೀಡಿದ 5 ಲಕ್ಷ ರೂ. ಸಾಲದ ವಸೂಲಿಗಾಗಿ ಟ್ರಿಬ್ಯೂನಲ್ ಮುಂದೆ ದಾವೆ ಹಾಕಿ 34,80,000 ರೂ.ಗಳಿಗೆ ಆದೇಶ ಪಡೆದು ಮಧ್ಯವರ್ತಿ ಜೊತೆ ಶಾಮೀಲಾಗಿ 4 ಕೋಟಿ ಬೆಲೆಬಾಳುವ ಜಮೀನನ್ನು 34,80,000 ರೂ.ಗಳಿಗೆ ಆನ್‌ಲೈನ್ ಹರಾಜು ಮಾಡಿ ರೈತನಿಗೆ ಮೋಸ ಮಾಡಿರುತ್ತಾರೆ. ಜಿಲ್ಲಾಧಿಕಾರಿಗಳು ಮತ್ತು ಸರ್ಕಾರ ಮಧ್ಯಪ್ರವೇಶಿಸಿ ಜಮೀನು ವಾಪಸು ಕೊಡಿಸಬೇಕು ಮತ್ತು ಆನ್‌ಲೈನ್ ಹರಾಜು ಪದ್ಧತಿಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿದರು. ನಂತರ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಚುನಾವಣೆ ಗೆಲ್ಲಬೇಕೆಂದರೆ ಕೇಂದ್ರದ ವೈಫಲ್ಯ ಕುರಿತು ಕಾಂಗ್ರೆಸ್ ಜನರಲ್ಲಿ ಜಾಗೃತಿ ಮೂಡಿಸಿಬೇಕು

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಕಾಂಗ್ರೆಸ್ ಪಕ್ಷ 2028ರ ವಿಧಾನಸಭೆ ಮತ್ತು 2029ರ ಲೋಕ ಸಭಾ ಚುನಾವಣೆಯನ್ನು ಗೆಲ್ಲಬೇಕೆಂದರೆ ನಮ್ಮ ಕಾರ್ಯಕ್ರಮಗಳು ಜನರಿಗೆ ತಲುಪಬೇಕು ಹಾಗೆಯೇ, ಕೇಂದ್ರದ ವೈಫಲ್ಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದಾಗ ಮಾತ್ರ ಸಾಧ್ಯ. ಹಾಗಾಗಿ ಮುಂಬರುವ ಚುನಾವಣೆಗಳನ್ನು ಕಾಂಗ್ರೆಸ್ ಪ್ರಚಾರ ಸಮಿತಿ ಗಂಭೀರವಾಗಿ ಪರಿಗಣಿಸಬೇಕು ಎಂದು ಕೆಪಿಸಿಸಿ ಪ್ರಚಾರ ಸಮಿತಿಅಧ್ಯಕ್ಷ ವಿನಯಕುಮಾರ್ ಸೊರಕೆ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕರ್ತರ ಸಭೆ ಹಾಗೂ ಪ್ರಚಾರ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಪ್ರಚಾರ ಸಮಿತಿಗೆ ಆಯ್ಕೆಯಾದ ಕಾರ್ಯಕರ್ತರಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡುತಿದ್ದ ಅವರು,ಎಐಸಿಸಿ ಪ್ರಚಾರ ಸಮಿತಿಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ವರ್ಷದ 365 ದಿನವೂ ಪಕ್ಷದ ಬಗ್ಗೆ ಪ್ರಚಾರಕೈಗೊಂಡರೆ ಮಾತ್ರ ನಮ್ಮ ಮುಂದಿರುವ ಆ ಎರಡುದೊಡ್ಡ ಗುರಿಗಳನ್ನು ತಲುಪಲು ಸಾಧ್ಯಎಂದರು.

ರಾಜ್ಯದಲ್ಲಿ ಪ್ರಚಾರ ಸಮಿತಿಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಈಗಾಗಲೇ 41 ಜಿಲ್ಲೆಗಳಲ್ಲಿ 40 ಜಿಲ್ಲೆಗಳ ಅಧ್ಯಕ್ಷರು, 425 ಬ್ಲಾಕ್‌ಗಳ ಅಧ್ಯಕ್ಷರುಗಳನ್ನು ನೇಮಕ ಮಾಡಲಾಗಿದೆ.ಜಿಲ್ಲೆಯಿಂದ ತಾಲೂಕು, ಹೋಬಳಿ,ಬೂತ ಮಟ್ಟದವರೆಗೆ ಪ್ರಚಾರ ಸಮಿತಿ ಸಂಘಟಿಸಬೇಕಿದೆ. ಒಂದು ಬೂತ್‌ಗೆ ಇಬ್ಬರಂತೆ ಪ್ರಚಾರ ಸಮಿತಿಯ ಸದಸ್ಯರು ನೇಮಕಗೊಂಡರೆ 1.20 ಲಕ್ಷಕಾರ್ಯಕರ್ತರಿಗೆಜವಾಬ್ದಾರಿ ನೀಡಿದಂತಾಗುತ್ತದೆ.ಮೇಲಿನಿಂದಒಂದು ಸಂದೇಶರವಾನೆಯಾದರೆಅದು ಬೂತ್ ಮಟ್ಟದವರಗೆತಲುಪಲು ಸಾಧ್ಯವಾಗಲಿದೆ. ಕಾಂಗ್ರೆಸ್ ಶೇ100 ರಷ್ಟು ಕೆಲಸ ಮಾಡಿ ಶೇ05 ರಷ್ಟು ಪ್ರಚಾರ ಪಡೆದರೆ, ಬಿಜೆಪಿ ಶೇ05ರಷ್ಟು ಕೆಲಸ ಮಾಡಿ, 100 ರಷ್ಟುಪ್ರಚಾರ ಪಡೆಯುತ್ತಿದೆ. ಹಾಗಾಗಿ ಬಿಜೆಪಿಯ ಈ ಸುಳ್ಳು ಪ್ರಚಾರದ ವಿರುದ್ಧ ನಿಜವಾದ ಕೆಲಸಗಾರರಾದ ಕಾಂಗ್ರೆಸ್ ಕಾರ್ಯಕರ್ತರು ಮುಂದಾಗುವಂತೆ ಕರೆ ನೀಡಿದರು.

ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷರಾದ ಮುನೀರ್ ಮಾತನಾಡಿ ,ಓಟ್ ಚೋರಿ ಎಂಬುದು ನಿನ್ನೆ ಮೊನ್ನೆ ಬಂದದ್ದಲ್ಲ, ಉತ್ತರ ಪ್ರದೇಶದಲುಸ್ತುವಾರಿಯಾಗಿ 2008ರಲ್ಲಿ ಅಮಿತ್ ಷಾ ನೇಮಕಗೊಂಡಾಗಲೇ ಆರಂಭವಾಗಿದ್ದು, ಏಕಾಏಕಿ ಮತದಾರ ಸಂಖ್ಯೆ ಹೆಚ್ಚಳ ಮಾಡಿ,ಕಾಂಗ್ರೆಸ್‌ನ ಮತಗಳನ್ನು ಡಿಲೀಟ್ ಮಾಡಿ, ಚುನಾವಣೆಯಲ್ಲಿ ಹೆಚ್ಚು ಮತಗಳಿಸುವ ತಂತ್ರಗಾರಿಕೆಯನ್ನು ಆರಂಭಿಸಿ, ಆ ನಂತರದಲ್ಲಿಅದನ್ನು ಬೇರೆ ರಾಜ್ಯಗಳಿಗೂ ವಿಸ್ತರಿಸುವ ಕೆಲಸ ಮಾಡಿದರು.ರಾಷ್ಟ್ರೀಯತೆ, ಧರ್ಮದ ಹೆಸರಿನಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆದಿದೆ. ಈಅನ್ಯಾಯವನ್ನು ತಡೆಯದಿದ್ದರೆ 2028ರ ಕರ್ನಾಟಕ ವಿಧಾನಸಭೆ ಮತ್ತು 2029ರ ಲೋಕಸಭೆಯಲ್ಲಿ ಪಕ್ಷಕ್ಕೆ ಹಿನ್ನೆಡೆಯಾಗಲಿದೆ. ಹಾಗಾಗಿ ನಾವೆಲ್ಲರೂ ಈಗಿನಿಂದಲೇ ಎಚ್ಚೆತ್ತು ಪಕ್ಷದ ಮತಗಳ ಜೊತೆಗೆ, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರ ಮತಗಳು ಅಳಿಸಿ ಹಾಕದಂತೆಎಚ್ಚರ ವಹಿಸಬೇಕು.ಈ ನಿಟ್ಟಿನಲ್ಲಿ ಪ್ರಚಾರ ಸಮಿತಿಯ ಜವಾಬ್ದಾರಿ ಹೆಚ್ಚಿದೆಎಂದರು.

ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಮಾತನಾಡಿ, ಪಕ್ಷದ ಕಾರ್ಯಕ್ರಮಗಳು, ಅವುಗಳ ಉಪಯೋಗಗಳನ್ನು ಜನರಿಗೆ ತಿಳಿಸುವ ಕೆಲಸವನ್ನು ಪ್ರಚಾರ ಸಮಿತಿ ಮಾಡಬೇಕಿದೆ.ಚುನಾವಣಾ ಆಯೋಗದ ಆಯುಕ್ತ ನೇಮಕಕ್ಕೆ ಇದುವರೆಗೂ ಇದ್ದ ನಿಯಮಾವಳಿಗೆ ತಿದ್ದು ಪಡಿತಂದು, ತಮಗೆ ಬೇಕಾದವರನ್ನು ನೇಮಕ ಮಾಡಿ, ವಿರೋಧ ಪಕ್ಷಗಳ ಮತಗಳನ್ನು ಕದಿಯುವ ಕೆಲಸ ಮಾಡಲಾಗುತ್ತಿದೆ.ಚುನಾವಣಾ ಆಯೋಗದ ಮುಂದೆ ಲಕ್ಷಾಂತರ ಆಕ್ಷೇಪಣೆಗಳು ನ್ಯಾಯಕ್ಕಾಗಿ ಕಾಯುತ್ತಿವೆ.ಈ ಅಕ್ರಮಗಳನ್ನು ಜನರ ಮುಂದೆತೆಗೆದು ಕೊಂಡು ಹೋಗಿ, ಪ್ರಜಾಪ್ರಭುತ ಸಂಪೂರ್ಣ ಹಾಳಾಗುವ ಮುನ್ನ ಸರಿಪಡಿಸಬೇಕಿದೆ ಎಂದರು.

ಪ್ರಸ್ತಾವಿಕ ನುಡಿಗಳನ್ನಾಡಿದ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ಇಕ್ಬಾಲ್ ಅಹಮದ್, ಕಾಂಗ್ರೆಸ್ ಸಿದ್ಧಾಂತಗಳಿಗೆ ಅನುಗುಣವಾಗಿ ಪಕ್ಷದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವುದರ ಜೊತೆಗೆ, ಬಿಜೆಪಿಯ ಜನ ವಿರೋಧಿ ನೀತಿಗಳನ್ನು ಜನರ ಮುಂದಿಡುವ ಕಾರ್ಯವನ್ನು ಪ್ರಚಾರ ಸಮಿತಿ ಸಮರ್ಥವಾಗಿ ಜಿಲ್ಲೆಯಲ್ಲಿ ಮಾಡುತ್ತಿದೆ. ಈಗಾಗಲೇ ಜಿಲ್ಲೆಯ 7 ತಾಲೂಕುಗಳಲ್ಲಿ ತಾಲೂಕು ಸಮಿತಿ ಮತ್ತು ಬೂತ್ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಇಂದು ಅವರಿಗೆ ನೇಮಕಾತಿ ಪತ್ರ ನೀಡಿ, ಸಂಘಟನೆಗೆ ಬಲ ನೀಡಲಾಗುತ್ತಿದೆ. ಮಸೀದಿ, ಮಂದಿರ, ಹಿಂದು–ಮುಸ್ಲಿಂ ಹೆಸರಿನಲ್ಲಿ ದೇಶದ ಜನರ ಕಣ್ಣಿಗೆ ಮಣ್ಣೆರೆಚುತ್ತಿರುವ ಬಿಜೆಪಿಯ ದುರಾಡಳಿತವನ್ನು ಜನರ ಮುಂದಿಡುವ ಕೆಲಸ ಮತ್ತಷ್ಟು ಚುರುಕುಗೊಳ್ಳಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಗೌಡ ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕ ಕೆ.ಎಸ್.ಕಿರಣ್ ಕುಮಾರ್, ಕೆಪಿಸಿಸಿ ಉಪಾಧ್ಯಕ್ಷರಾದ ಮಂಜುನಾಥ್,ವಾಸು ದೇವಮೂರ್ತಿ, ಷಣುಮುಖಪ್ಪ ಆರ್. ರಾಮಕೃಷ್ಣ, ಮುಂಚೂಣಿ ಘಟಕದಗಳ ಮುಖಂಡರಾದ ಅನಿಲ್, ನಿಂಗರಾಜು, ವಿಜಯಗೌಡ, ಫಯಾಜ್, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಿಂಹಾದ್ರಿಯ ಕೊಲೆಗಾರರಿಗೆ ಕಠಿಣ ಶಿಕ್ಷೆ ವಿಧಿಸಬೇಕು

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಮಧುಗಿರಿ ತಾಲೂಕು ಕಾಸಾಪುರ ಗ್ರಾಮದ ದಲಿತ ಯುವಕ ಸಿಂಹಾದ್ರಿಯ ಕೊಲೆಗಾರರಿಗೆ ಕಠಿಣ ಶಿಕ್ಷೆ ವಿಧಿಸಬೇಕು .ಇದಕ್ಕೆ ಕುಮ್ಮಕ್ಕು ನೀಡಿದವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಇಂದು ಜಿಲ್ಲಾ ಛಲವಾದಿ ಮಹಾಸಭಾ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಿರುವ ಛಲವಾದಿ ಮುಖಂಡರು, ದಲಿತ ಯುವಕ ಸಿಂಹಾದ್ರಿಯ ಸಾವಿಗೆ ನ್ಯಾಯ ದೊರಕಿಸುವಂತೆ ಮನವಿಯಲ್ಲಿ ಆಗ್ರಹಿಸಿದ್ದಾರೆ. ಗಣೇಶನನ್ನ ವಿಸರ್ಜಿಸುವ ವೇಳೆ ಕ್ಷುಲ್ಲಕ ಕಾರಣಕ್ಕಾಗಿ ಸಿಂಹಾದ್ರಿಯ ಮೇಲೆ ಗ್ರಾಮದ ಮಾರುತೇಶ ಹಲ್ಲೇ ನಡೆಸಿದ್ದರಿಂದ ತೀವ್ರ ಗಾಯಗೊಂಡು ಸ್ಥಳದಲ್ಲಿ ಹತ್ಯಯಾಗಿದ್ದಾನೆ. ಈ ಕೊಲೆಗೆ ಕುಮ್ಮಕ್ಕು ನೀಡಿದವರು ಯಾರು ಎಂಬುದನ್ನು ಪೊಲೀಸರು ಪತ್ತೆಹಚ್ಚ ಬೇಕೆಂದು ಆಗ್ರಹಿಸುತ್ತೇವೆ.

ವಿದ್ಯಾಭ್ಯಾಸತೊರೆದು ಬೇರೊಬ್ಬರ ತೋಟಗಳಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ ಮಗನನ್ನು ಕಳೆದು ಕೊಂಡ ತಾಯಿ ಇಂದು ಅನಾಥವಾಗಿದ್ದಾಳೆ, ಮಧುಗಿರಿ ತಾಲೂಕಿನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಮೂವರು ದಲಿತ ಯುವಕರ ಕೊಲೆಯಾಗಿರುವುದು ದಲಿತರಲ್ಲಿ ಭಯದ ವಾತಾವರಣದ ಜೊತೆಗೆ ಆತಂಕ ಮನೆ ಮಾಡಿದೆ. ಸೆಪ್ಟೆಂಬರ್26 ರಂದು ಭಾನುವಾರ ಮಧ್ಯಾಹ್ನ ಕಾಸಾಪುರ ಗ್ರಾಮದ ಮಾರಮ್ಮ ದೇವಸ್ಥಾನದ ಹತ್ತಿರ ಗಣೇಶ ವಿಸರ್ಜಿಸಲು ಮೆರವಣಿಗೆ ಮಾಡುತ್ತಿದ್ದ ಸಂದರ್ಭದಲ್ಲಿ ಡ್ಯಾನ್ಸ್ ಮಾಡುವ ವಿಚಾರವಾಗಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದು ದಲಿತ ಯುವಕ ಸಿಂಹಾದ್ರಿಗೆ ಮಾರುತೇಶ ಜಾತಿ ನಿಂದನೆ ಮಾಡಿ ಕಲ್ಲಿನಿಂದ ಎದೆಗೆ ಹೊಡೆದು ಕೊಲೆ ಮಾಡಿದ್ದಾನೆ ಎಂದು ತಾಯಿ ಆರೋಪಿಸಿ ದೂರು ನೀಡಿದ್ದಾಳೆ.ಜಿಲ್ಲೆಯಲ್ಲಿ ದಲಿತರ ಮೇಲೆ ದೌರ್ಜನ್ಯಗಳು ನಿರಂತರ ವಾಗಿ ನಡೆಯುತ್ತಿವೆದೌರ್ಜನ್ಯತಡೆಗಟ್ಟುವಲಿ ಜಿಲ್ಲಾಡಳಿತ ಸಂಪೂರ್ಣವಾಗಿ ವಿಫಲವಾಗಿದೆ. ಗ್ರಾಮದಲ್ಲಿಗಣೇಶನನ್ನು ವಿಸರ್ಜಿಸುವ ವೇಳೆ ಪೊಲೀಸರು ಸ್ವಲ್ಪಎಚ್ಚರಿಕೆ ವಹಿಸಿದ್ದರೆ ಇಂದು ಸಿಂಹಾದ್ರಿ ಬದುಕುಳಿಯುತ್ತಿದ್ದನು. ಸಿಂಹಾದ್ರಿಯ ಸಾವಿಗೆ ಜಿಲ್ಲಾಡಳಿತವೇ ನೇರ ಹೊಣೆ ಹೊರ ಬೇಕಾಗುತ್ತದೆಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈಜಿಲ್ಲಾಡಳಿತ ದಲಿತಯುವಕ ಸಿಂಹಾದ್ರಿ ಹತ್ಯೆಗೈದಆರೋಪಿಗೆಕಠಿಣ ಶಿಕ್ಷೆಯಾಗುವಂತೆ ನೋಡಿ ಕೊಳ್ಳಬೇಕು ಮತ್ತು ಕೊಲೆಗೆ ಕುಮ್ಮಕ್ಕು ನೀಡಿದ ಆರೋಪಿಗಳ ವಿರುದ್ಧಕೂಡಲೇ ಪ್ರಕರಣ ದಾಖಲಿಸಿ ಬಂಧಿಸಬೇಕು,ಜಿಲ್ಲಾ ಆಡಳಿತ ಪ್ರಕರಣವನ್ನುಗಂಭೀರವಾಗಿ ಪರಿಗಣಿಸಿ ವಿಶೇಷ ಪ್ರಕರಣವೆಂದು ಭಾವಿಸಿ ಉನ್ನತ ಮಟ್ಟದತನಿಖೆಗೆ ವಹಿಸಬೇಕು.ವೃದ್ಧಾಪ್ಯದಕಾಲದಲ್ಲಿತಾಯಿಗೆಆಶ್ರಯ ವಾಗಬೇಕಾಗಿದ್ದ ಮಗನನ್ನು ಕಳೆದು ಕೊಂಡತಾಯಿಗೆ 50 ಲಕ್ಷ ಪರಿಹಾರ ಮತ್ತು ಎರಡು ಎಕರೆ ಭೂಮಿ ನೀಡಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ1989, ಅನ್ವಯ ವಾಗುವ ಅಂಶಗಳು ಕಂಡು ಬಂದರೆ ಕೂಡಲೇ ಸೇರಿಸಿ ಕೊಳ್ಳಬೇಕುಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವ ವೇಳೆ ಜಿಲ್ಲಾ ಛಲವಾದಿ ಮಹಾಸಭಾದ ಸಿ.ಭಾನುಪ್ರಕಾಶ್, ರಂಗಯ್ಯ, ಯಲ್ಲಯ್ಯ, ಹೆಗ್ಗೆರೆ ಕೃಷ್ಣಪ್ಪ, ಗುರುಪ್ರಸಾದ್ ಜೈಪುರ, ಗಿರೀಶ್, ಛಲವಾದಿ ಶೇಖರ್, ಸಿದ್ದಲಿಂಗಯ್ಯ, ಶಿವಣ್ಣ ಕೊತ್ತಿಹಳ್ಳಿ, ಮಂಜುನಾಥ್ ಹಾಗೂ ಸಮುದಾಯದ ಮುಖಂಡರು ಜೊತೆಗಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಪಾವತಿ ಖಾತೆ ಆಂದೋಲನಕ್ಕೆ ಚುರುಕು:

ಹಳ್ಳಿ ಹಳ್ಳಿಗೆ ತೆರಳಿ ಅರಿವು ಮೂಡಿಸುತ್ತಿರುವ ತಹಸೀಲ್ದಾರ್

ಸೂರ್ಯಪ್ರಗತಿನ್ಯೂಸ್.ಕಾಂ



ಕೊರಟಗೆರೆ: ತಾಲ್ಲೂಕಿನಲ್ಲಿ ಪಹಣಿ ಪಾವತಿ ಖಾತೆ ಆಂದೋಲನಕ್ಕೆ ತಹಸೀಲ್ದಾರ್ ಮಂಜುನಾಥ್ ಕೆ ಅವರು ವೇಗ ನೀಡಿದ್ದು, ಖುದ್ದು ತಾವೇ ಹಳ್ಳಿಗಳಿಗೆ ಭೇಟಿ ನೀಡಿ ರೈತರಲ್ಲಿ ಜಾಗೃತಿ ಮೂಡಿಸುತ್ತಿರುವುದು ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.

ತಾಲ್ಲೂಕಿನಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಪಹಣಿ ಪಾವತಿ ಖಾತೆ ಆಂದೋಲನ ಪ್ರಗತಿಯಲ್ಲಿದ್ದು, ತಹಸೀಲ್ದಾರ್ ಮಂಜುನಾಥ್ ಕೆ. ಅವರು ಕೇವಲ ಕಚೇರಿಗೆ ಸೀಮಿತವಾಗದೆ, ನೇರವಾಗಿ ರೈತರ ಮನೆ ಬಾಗಿಲಿಗೆ ತೆರಳಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ರೈತರು ತಮ್ಮ ಜಮೀನಿನ ಪಹಣಿ ಮತ್ತು ಪಾವತಿ ಖಾತೆಯನ್ನು ತಿದ್ದುಪಡಿ ಮಾಡಿಸಿಕೊಂಡರೆ ಪಿಎಂ ಕಿಸಾನ್ ಸಮ್ಮಾನ್, ಬೆಳೆ ವಿಮೆ, ರಸಗೊಬ್ಬರ ಸಬ್ಸಿಡಿ,ಬೆಳೆ ಸಾಲ ಸೇರಿದಂತೆ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಸುಲಭವಾಗಿ ಪಡೆಯಬಹುದು ಎಂದು ರೈತರಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ.

"ಎಲ್ಲರೂ ಕಡ್ಡಾಯವಾಗಿ , ಪಡಿತರ ಚೀಟಿ ಇ-ಕೆವೈಸಿ ಮತ್ತು ಪಿಎಂ ಕಿಸಾನ್ ಇ-ಕೆವೈಸಿ ಮಾಡಿಸಿಕೊಳ್ಳಿ, ಇದರಿಂದ ಪಡಿತರ ಮತ್ತು ಕಿಸಾನ್ ಹಣ ನಿಲ್ಲುವುದಿಲ್ಲ. ಯಾರಿಗೆ ವೃದ್ಧಾಪ್ಯ ವೇತನ ಬರುತ್ತಿಲ್ಲವೋ ಅಂತಹವರು ನಮ್ಮ ಗಮನಕ್ಕೆ ತನ್ನಿ, ಕೂಡಲೇ ವೇತನ ಬರುವಂತೆ ಮಾಡಿಕೊಡುತ್ತೇವೆ" ಎಂದು ಭರವಸೆ ನೀಡಿದರು.

ವೃದ್ಧೆಗೆ ತಕ್ಷಣ ಸ್ಪಂದನೆ: ಗ್ರಾಮದ ಭೇಟಿ ವೇಳೆ ಓರ್ವ ವೃದ್ಧೆ "ನನ್ನ ಆಧಾರ್ ಕಾರ್ಡ್ ನವೀಕರಣ ಆಗುತ್ತಿಲ್ಲ, ಕಣ್ಣು ಮತ್ತು ಬೆರಳಚ್ಚು ಬರುತ್ತಿಲ್ಲ. ಇದರಿಂದ ನನ್ನ ಪಡಿತರ ಚೀಟಿ ಇ-ಕೆವೈಸಿ ಮಾಡಿಸಲು ಆಗುತ್ತಿಲ್ಲ" ಎಂದು ಅಳಲು ತೋಡಿಕೊಂಡರು. ತಕ್ಷಣ ಸ್ಪಂದಿಸಿದ ತಹಸೀಲ್ದಾರರು ಸ್ಥಳದಲ್ಲಿದ್ದ ಸಿಬ್ಬಂದಿಗೆ ವೃದ್ಧೆಯ ಸಮಸ್ಯೆ ಬಗೆಹರಿಸಿ, ಪಡಿತರ ದೊರೆಯುವಂತೆ ಮಾಡಲು ಸೂಚಿಸಿದರು. ಹವಾ ನಿಯಂತ್ರಿತ ಕೊಠಡಿಯ ಕಚೇರಿಯಲ್ಲಿ ಕುಳಿತು ಕೆಲಸ ಮಾಡುವ ಈ ಕಾಲದಲ್ಲಿ ತಹಸೀಲ್ದಾರ್ ರವರು ಹಳ್ಳಿಗಳಿಗೆ ಸ್ವತಃ ತಾವೇ ತೆರಳಿ ಜನಪರ ಕಾಳಜಿಯಿಂದ ಕೆಲಸ ಮಾಡುತ್ತಿರುವುದು ರೈತರ ಮೆಚ್ಚುಗೆಗೆ ಪಾತ್ರವಾಗಿದೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.